ಸಾರ್ವಜನಿಕ ಶಿಕ್ಷಣ ಇಲಾಖೆ ಹೂವಿನ ಹಡಗಲಿ ಜಿ: ಬಳ್ಳಾರಿ

## ಹೂವಿನ ಹಡಗಲಿ ಸಮಾಜ ವಿಜ್ಞಾನ ವಿಷಯ ಶಿಕ್ಷಕರ ವೇದಿಕೆ.

## ಜಿ: ಬಳ್ಳಾರಿ

## 10 ನೇ ತರಗತಿ ಸಮಾಜ ವಿಜ್ಞಾನ

# ಪಾಸಿಂಗ್ ಪ್ಯಾಕೇಜ್

(10 ನೇ ತರಗತಿ ನಿಧಾನ ಕಲಿಕೆ ವಿಧ್ಯಾರ್ಥಿಗಳಿಗಾಗಿ ಬಹು ನಿರೀಕ್ಷಿತ ಪ್ರಶ್ನೆಗಳು ಮತ್ತು ಅವುಗಳಿಗೆ ಸರಳ ಮತ್ತು ಸಂಕ್ಷಿಪ್ತ ಉತ್ತರಗಳು)


| ಸಾಹಿತ್ಯ ರಚನಾ ತಂಡ | |
|---|---|
| **ಶ್ರೀನಿವಾಸ ಹೆಚ್.ಕೆ.** ಸಹ ಶಿಕ್ಷಕರು<br>ಸರಕಾರಿ ಪ್ರೌಢ ಶಾಲೆ ಬೂದನೂರು<br>ತಾ: ಹೂವಿನ ಹಡಗಲಿ ಜಿ: ಬಳ್ಳಾರಿ | **ಯಲ್ಲಪ್ಪ ಹಂದ್ರಾಳ** ಸಹ ಶಿಕ್ಷಕರು<br>ವಿ.ಕೆ.ಕೆ.ಸ.ಪ.ಪೂ.ಕಾಲೇಜ್, ಹಿರೇ ಹಡಗಲಿ<br>ತಾ: ಹೂವಿನ ಹಡಗಲಿ ಜಿ: ಬಳ್ಳಾರಿ |
| **ಎಸ್. ಟಿ. ಹಾದಿಮನಿ.** ಸಹ ಶಿಕ್ಷಕರು<br>ಸರಕಾರಿ ಪ್ರೌಢ ಶಾಲೆ ಬ್ಯಾಲಹುಣಸಿ<br>ತಾ: ಹೂವಿನ ಹಡಗಲಿ ಜಿ: ಬಳ್ಳಾರಿ | **ಬನ್ನೆಪ್ಪ ಕಟ್ಟಿ.** ಸಹ ಶಿಕ್ಷಕರು<br>ಎಸ್.ಎಸ್.ಬಿ.ಹೆಚ್ ಸರಕಾರಿ ಪ್ರೌಢ ಶಾಲೆ, ಹಿರೇಕೊಳಚಿ<br>ತಾ: ಹೂವಿನ ಹಡಗಲಿ ಜಿ: ಬಳ್ಳಾರಿ |
| **ರಾಘವೇಂದ್ರ ಪಾಟೀಲ್** ಸಹ ಶಿಕ್ಷಕರು<br>ಸರಕಾರಿ ಪ್ರೌಢ ಶಾಲೆ ಹ್ಯಾರಡ<br>ತಾ: ಹೂವಿನ ಹಡಗಲಿ ಜಿ: ಬಳ್ಳಾರಿ | |


–:*****************************************************************:–

**ಕಠಿಣ ಪರಿಶ್ರಮ ಯಶಸ್ಸಿಗೆ ದಾರಿ**

## ಪಾಸಿಂಗ್ ಪ್ಯಾಕೇಜ್ ಗೆ ಆಯ್ದುಕೊಂಡ ಅಧ್ಯಾಯಗಳು

(ಮಂಡಳಿಯ 2 ಮಾದರಿ ಪ್ರಶ್ನೆಪತ್ರಿಕೆಗಳ ವಿಶ್ಲೇಷಣೆ ಆಧರಿಸಿ ಈ ಕೆಳಕಂಡ ಪಾಠಗಳನ್ನು ಆಯ್ದುಕೊಂಡಿದೆ)

| ಕ್ರ.ಸಂ | ಅಧ್ಯಾಯಗಳು | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಸ್ವಾತಂತ್ರ್ಯೋತ್ತರ ಭಾರತ | 1 ಅಂಕ ಮತ್ತು 2 ಅಂಕ | 1ಅಂಕದ 19, 2ಅಂಕದ 8 |
| 2 | 20 ನೇ ಶತಮಾನದ ರಾಜಕೀಯ ಆಯಾಮಗಳು | 1 ಅಂಕ ಮತ್ತು 2 ಅಂಕ | 1ಅಂಕದ 18, 2ಅಂಕದ 11 |
| 3 | ಸಾಮಾಜಿಕ ಚಳುವಳಿಗಳು | 1 ಅಂಕ ಮತ್ತು 2 ಅಂಕ | 1ಅಂಕದ 11, 2ಅಂಕದ 10 |
| 4 | ಸಾಮಾಜಿಕ ಸಮಸ್ಯೆಗಳು | 1 ಅಂಕ ಮತ್ತು 2 ಅಂಕ | 1ಅಂಕದ 8, 2ಅಂಕದ 11 |
| 5 | ಭಾರತದ ಪ್ರಾಕೃತಿಕ ಲಕ್ಷಣಗಳು | 1 ಅಂಕ ಮತ್ತು 2 ಅಂಕ | 1ಅಂಕದ 14, 2ಅಂಕದ 12 |
| 6 | ಭಾರತದ ವಾಯುಗುಣ | 1 ಅಂಕ ಮತ್ತು 2 ಅಂಕ | 1ಅಂಕದ 11, 2ಅಂಕದ 9 |
| 7 | ಅಭಿವೃದ್ಧಿ | 1 ಅಂಕ ಮತ್ತು 2 ಅಂಕ | 1ಅಂಕದ 7, 2ಅಂಕದ 4 |
| 8 | ಗ್ರಾಹಕ ಶಿಕ್ಷಣ ಮತ್ತು ರಕ್ಷಣೆ | 1 ಅಂಕ ಮತ್ತು 2 ಅಂಕ | 1ಅಂಕದ 8, 2ಅಂಕದ 7 |
| 9 | ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು | 3 ಅಂಕ | 10 |
| 10 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | 3 ಅಂಕ | 5 |
| 11 | ಸಾಮಾಜಿಕ ಸ್ತರ ವಿನ್ಯಾಸ | 3 ಅಂಕ | 3 |
| 12 | ದುಡಿಮೆ | 3 ಅಂಕ | 2 |
| 13 | ಭಾರತದ ಕೈಗಾರಿಕೆಗಳು | 3 ಅಂಕ | 6 |
| 14 | ಹಣ ಮತ್ತು ಸಾಲ | 3 ಅಂಕ | 4 |
| 15 | ಉದ್ಯಮಗಾರಿಕೆ | 3 ಅಂಕ | 6 |
| 16 | ಸ್ವಾತಂತ್ರ್ಯ ಹೋರಾಟ | 4 ಅಂಕ | 5 |
| 17 | ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ | 4 ಅಂಕ | 10 |
| 18 | ಭಾರತದ ಸಮಸ್ಯೆಗಳು ಮತ್ತು ಪರಿಹಾರಗಳು | 4 ಅಂಕ | 9 |
| 19 | ಭೂಗೋಳದ 1, 2, 6, 8, 9, 10 ನೇ ಅಧ್ಯಾಯ | ನಕಾಶೆ | 12 |

## 1 ಅಂಕದ ಪ್ರಶ್ನೆಗಳು

### ಸ್ವಾತಂತ್ರ್ಯೋತ್ತರ ಭಾರತ

1. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಇದ್ದ ಒಟ್ಟು ದೇಶಿ ಸಂಸ್ಥಾನಗಳ ಸಂಖ್ಯೆ ಎಷ್ಟು?

ಉ– 562

2. "ಸಂಪತ್ತಿನ ಸೋರಿಕೆ ಸಿದ್ಧಾಂತ" ಪ್ರತಿಪಾದಿಸಿದವರು ಯಾರು?

ಉ– ದಾದಾಬಾಯಿ ನವರೋಜಿ

3. ಬಾಂಗ್ಲಾ ವಿಮೋಚನೆಯಾದ ವರ್ಷ ಯಾವುದು?

ಉ– 1971

4. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಇದ್ದ ಗವರ್ನರ್ ಜನರಲ್/ ಕಂಪನಿಯ ಕೊನೆಯ ಗವರ್ನರ್ ಜನರಲ್ ಯಾರು?

ಉ– ಮೌಂಟ್ ಬ್ಯಾಟನ್

5. ಭಾರತದ ಸಂವಿಧಾನ ಜಾರಿಗೆ ಬಂದ ವರ್ಷ ಯಾವುದು?

ಉ– 1950 ಜನೆವರಿ 26

6. ಭಾರತದ ಪ್ರಥಮ ಗೃಹಮಂತ್ರಿ/"ಭಾರತದ ಉಕ್ಕಿನ ಮನುಷ್ಯ".

ಉ– ಸರ್ಧಾರ್ ವಲ್ಲಭಭಾಯಿ ಪಟೇಲ

7. ಹೈದರಾಬಾದ ನಿಜಾಮನ 'ಕ್ರೂರ ಪಡೆ'ಯ ಹೆಸರೇನು?

ಉ–ರಜಾಕಾರರು

8. ಹೈದರಾಬಾದ್ ಸಂಸ್ಥಾನ ಭಾರತದಲ್ಲಿ ವಿಲೀನವಾದ ವರ್ಷ.

ಉ– 1948

9. ಜುನಾಗಡ್ ಸಂಸ್ಥಾನ ಭಾರತದಲ್ಲಿ ವಿಲೀನವಾದ ವರ್ಷ.

ಉ– 1949

10. ಬಾಂಗ್ಲಾದಿಂದ ಬಂದ ನಿರಾಶ್ರಿತರು ಬಂಗಾಳದಲ್ಲಿ ನೆಲೆಯೂರಲು ಕಾರಣವೇನು?

ಉ– ಬಂಗಾಳಿ ಭಾಷೆ.

11. ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯವ್ಯ ಭಾಗವನ್ನು ಏನೇಂದು ಕರೆಯುತ್ತಾರೆ?

ಉ– ಪಾಕ್ ಆಕ್ರಮಿತ ಕಾಶ್ಮೀರ.

12. ಗೋವಾ ಸ್ವಾತಂತ್ರ್ಯವಾದ ವರ್ಷ ಯಾವುದು?

ಉ– 1961

13. ಕೇಂದ್ರಾಡಳಿತ ಪ್ರದೇಶವಾಗಿದ್ದ ಗೋವಾ ಯಾವಾಗ ರಾಜ್ಯವಾಯಿತು?

ಉ– 1987.

14. ರಾಜ್ಯ ಪುನರ್ವಿಂಗಡನಾ ಕಾನೂನು ಜಾರಿಗೆ ಬಂದ ವರ್ಷ?

ಉ– 1956

15. ಆಂದ್ರ ಪ್ರದೇಶ ರಾಜ್ಯ ರಚನೆಗಾಗಿ ಉಪವಾಸ ಸತ್ಯಾಗ್ರಹ ಕೈಗೊಂಡು ಅಸುನೀಗಿದವರು ಯಾರು?

ಉ– ಪೊಟ್ಟಿ ಶ್ರೀರಾಮುಲು.

16. ಭಾಷೆಯ ಆಧಾರದಲ್ಲಿ ರಚನೆಯಾದ ಮೊದಲ ರಾಜ್ಯ.

ಉ– ಆಂದ್ರಪ್ರದೇಶ (1953 ರಲ್ಲಿ)

17. ವಿಶಾಲ ಮೈಸೂರು ರಾಜ್ಯ ರಚನೆಯಾದ ವರ್ಷ ಯಾವುದು?

ಉ– ನವೆಂಬರ್ 1, 1956

18. ಕರ್ನಾಟಕ ಎಂದು ಮರು ನಾಮಕರಣ ಮಾಡಿದ ವರ್ಷ.

ಉ– ನವೆಂಬರ್ 1, 1973

19. ಭಾರತದ ಒಟ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ ಎಷ್ಟು?

ಉ– ರಾಜ್ಯಗಳು 29, ಕೇಂದ್ರಾಡಳಿತ ಪ್ರದೇಶಗಳು 7

### 20ನೇ ಶತಮಾನದ ರಾಜಕೀಯ ಆಯಾಮಗಳು.

20. ಒಂದನೇಯ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?

ಉ– ಆಸ್ಟ್ರೀಯಾದ ರಾಜಕುಮಾರ "ಆರ್ಕ್ ಡೂಕ್ ಫ್ರಾನ್ಸಿಸ್ ಫರ್ಡಿನೆಂಡ್" ನ ಕೊಲೆ.

21. ರಷ್ಯಾ ಮೊದಲನೇ ಮಹಾಯುದ್ದದಿಂದ ಹಿಂದೆ ಸರಿಯಲು ಕಾರಣವೇನು?

ಉ– ಸಮಾಜವಾದಿ ಕ್ರಾಂತಿ.

22. ರಷ್ಯಾ ಕ್ರಾಂತಿ ಸಂಭವಿಸಿದ ವರ್ಷ ಯಾವುದು?

ಉ– 1917

23. ಯಾವ ಒಪ್ಪಂದದಿಂದ ಒಂದನೇಯ ಮಹಾಯುದ್ಧ ಮುಗಿಯಿತು?

ಉ– 1919 ರ ವರ್ಸೈಲ್ಸ್ ಒಪ್ಪಂದ.

24. ರಾಷ್ಟ್ರ ಸಂಘ (ಲೀಗ್ ಆಫ್ ನೇಷನ್ಸ್) ರಚನೆಯಾದ ವರ್ಷ.

ಉ– 1919

25. ಮೊದಲ ಮಹಾಯುದ್ದದ ನಂತರ ಅಸ್ತಿತ್ವ ಕಳೆದುಕೊಂಡ ಸಾಮ್ರಾಜ್ಯ ಯಾವುದು?

ಉ– ಆಸ್ಟ್ರೋ–ಹಂಗೇರಿ

26. ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದವರು ಯಾರು?

ಉ– ಜೋಸೆಫ್ ಸ್ಟಾಲಿನ್.

27. ಜಗತ್ತಿನ ಮೊದಲ ಗಗನಯಾತ್ರಿ ಯಾರು?

ಉ– ಯುರಿ ಗಗಾರಿನ್.

28. ಜರ್ಮನಿಯ ಸರ್ವಾಧಿಕಾರಿ/ ಬೂದು ಅಂಗಿದಳ ಕ್ರೌರ್ಯ ಪಡೆ ಕಟ್ಟಿದವರು ಯಾರು?

ಉ– ಹಿಟ್ಲರ್.

29. 'ಗೋಬೆಲ್ಸ್' ಎಂದರೇನು?

ಉ– 'ಜನಾಂಗೀಯ ದ್ವೇಷ'ವನ್ನು ಪ್ರಸಾರ ಮಾಡಲು ಹಿಟ್ಲರ್ ನೇಮಿಸಿದ ಮಂತ್ರಿ.

30. 'ಹೋಲೋಕಾಸ್ಟ್' ಎಂದರೇನು?

ಉ– ಹಿಟ್ಲರನ ಸಾಮೂಹಿಕ ಕಗ್ಗೊಲೆಗಳು.

31. ಹಿಟ್ಲರನ ಸ್ಥಾಪಿಸಿದ ಪಕ್ಷ ಯಾವುದು?

ಉ– ನಾಝಿ ಪಕ್ಷ

32. ಮುಸೋಲಿನಿಯ ಪಕ್ಷ ಯಾವುದು?

ಉ– ರಾಷ್ಟ್ರೀಯ ಫ್ಯಾಸಿಸ್ಟ್. ಪಕ್ಷ

33. ಚೀನಾದಲ್ಲಿ ಕ್ಯೊಮಿಟಾಂಗ್ ಪಕ್ಷ ಕಟ್ಟಿ ಪ್ರಜಾಪ್ರಭುತ್ವ ಕ್ರಾಂತಿ ಮಾಡಿದ ನಾಯಕ ಯಾರು?

ಉ– ಸನ್–ಯಾತ್–ಸೇನ್

34. ಶೀತಲ ಸಮರ ಎಂದರೇನು?

ಉ– ಜಾಗತಿಕವಾಗಿ ಎರಡು ಬಣಗಳ ನಡುವಿನ ನಿರಂತರ ಭಯ, ದ್ವೇಷ, ಅಸೂಯೆ ಮತ್ತು ಆತಂಕದ ಪರಿಸ್ಥಿತಿ'

35. ಶೀತಲ ಸಮರದಲ್ಲಿ ರಷ್ಯಾ ನೇತೃತ್ವದಲ್ಲಿ ರಚನೆಗೊಂಡ ಮಿಲಿಟರಿ ಕೂಟ ಯಾವುದು?

ಉ– ವಾರ್ಸಾ.

36. ಅಮೆರಿಕಾದಲ್ಲಿ ಆರ್ಥಿಕ ಮಹಾಕುಸಿತ ಸಂಭವಿಸಿದ ವರ್ಷ.

ಉ– 1927

37. ಅಮೇರಿಕಾದ ಯಾವ ನೌಕಾ ನೆಲೆಯ ಮೇಲೆ ಜಪಾನ್ ದಾಳಿ ನಡೆಸಿತು?

ಉ– ಪರ್ಲ್ ಹಾರ್ಬರ್

## ಸಾಮಾಜಿಕ ಚಳುವಳಿಗಳು.

38. 'ದೇವರೇ ಸತ್ಯ' ಎನ್ನುತ್ತಿದ್ದ ಗಾಂಧೀಜಿ ನಂತರ 'ಸತ್ಯವೇ ದೇವರು' ಎನ್ನಲು ಕಾರಣವಾದ ಅಂಶ ಯಾವುದು?

ಉ– ಸಾಮಾಜಿಕ ಚಳುವಳಿಗಳು.

39. ದೊಂಬಿ/ಗಲಭೆ ಎಂದರೇನು?

ಉ– ಹಿಂಸಾತ್ಮಕ ಸ್ವರೂಪದ ಜನಮಂದೆಯ ವರ್ತನೆ.

40. ಚಿಪ್ಕೋ ಚಳುವಳಿ ಎಲ್ಲಿ ನಡೆಯಿತು?

ಉ– ಉತ್ತರ ಪ್ರದೇಶದ "ರೆನ್ನಿ" ಗ್ರಾಮದಲ್ಲಿ.(1974 ರಲ್ಲಿ)

41. ಕರ್ನಾಟಕದಲ್ಲಿ ಅಪ್ಪಿಕೋ ಚಳುವಳಿ ಎಲ್ಲಿ ನಡೆಯಿತು?

ಉ– ಉತ್ತರ ಕನ್ನಡ ಜಿಲ್ಲೆಯ 'ಸಲ್ಯಾನಿ' ಗ್ರಾಮದಲ್ಲಿ.(1983 ರಲ್ಲಿ)

42. ನರ್ಮದಾ ಬಚಾವೋ ಆಂದೋಲನದ ನಾಯಕರು ಯಾರು?

ಉ– ಮೇಧಾ ಪಾಟ್ಕರ್.

43. ಮೌನ ಕಣಿವೆ ಆಂದೋಲನ ನಡೆದ ಸ್ಥಳ ಯಾವುದು?

ಉ– ಕೇರಳದ ಪಾಲ್ಘಾಟ್ ತಾಲೂಕು.

44. ಕೈಗಾ ಅಣುಸ್ಥಾವರ ವಿರೋಧಿ ಚಳುವಳಿಯ ನಾಯಕರು.

ಉ– ಶಿವರಾಮ್ ಕಾರಂತ್.

45. ಮಹಿಳಾ ಚಳುವಳಿಗಳಲ್ಲಿ ಪಾನ ನಿಷೇಧ ಚಳುವಳಿ ಪ್ರಮುಖವಾಗಿದೆ ಏಕೆ?

ಉ– ಮಹಿಳೆಯರು ಒಗ್ಗಟ್ಟಾಗಿರುತ್ತಾರೆ.

46. ಮದ್ಯಾನ ನಿಷೇಧ ಚಳುವಳಿಯಲ್ಲಿ ತಮ್ಮ ಪ್ರಾಣ ಕಳೆದುಕೊಂಡವರು ಯಾರು?

ಉ– ಕುಸುಮ ಸೊರಬ.

47. ಜಗತ್ತಿನ ಮೊದಲ ಕಾರ್ಮಿಕ ಸಂಘ ಎಲ್ಲಿ, ಯಾವಾಗ ಸ್ಥಾಪನೆಯಾಯಿತು?

ಉ– 1864 ರಲ್ಲಿ, ಲಂಡನ್.

48. ಕಾರ್ಮಿಕ ಸಂಘಟನೆಗಳಿಗೆ ಪ್ರಜಾಸತ್ತಾತ್ಮಕ ಮನ್ನಣೆ ನೀಡಿದ ಕಾಯ್ದೆ ಯಾವುದು?

ಉ– 1923 ರ ಕಾರ್ಮಿಕ ಕಾಯ್ದೆ.

## ಸಾಮಾಜಿಕ ಸಮಸ್ಯೆಗಳು.

49. ಬಾಲ ಕಾರ್ಮಿಕರು ಎಂದರೆ ಯಾರು?

ಉ– 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ಧೇಶದಿಂದ ದುಡಿಮೆ ಮಾಡುವುದು.

50. ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಜಾರಿಗೆ ಬಂದ ವರ್ಷ ಯಾವುದು?

ಉ– 1986 (ಇದಕ್ಕೆ 2016 ರಲ್ಲಿ ತಿದ್ದುಪಡಿ)

51. ಹೆಣ್ಣು ಭ್ರೂಣ ಹತ್ಯೆ ಎಂದರೇನು?

ಉ– ತಾಯಿಯ ಗರ್ಭದಲ್ಲಿ ಹೆಣ್ಣು ಭ್ರೂಣದ ಹತ್ಯೆ

52. 2012 ರಲ್ಲಿ ಭಾರತದ ಲಿಂಗಾನುಪಾತ ಎಷ್ಟಿತ್ತು?

ಉ– 940

53. 'ಹಸಿವು' ಎಂದರೇನು?

ಉ– ನಿಗದಿತ ಆಹಾರ ಸತತವಾಗಿ ದೊರಕದಿರುವುದು.

54. ಕಾಣದ ಹಸಿವು ಎಂದರೇನು?

ಉ– ಆಹಾರದಲ್ಲಿನ ಪೋಷಕಾಂಶಗಳ ಕೊರತೆ.

55. ಜೆಂಡರ್/ಲಿಂಗತ್ವ ಎಂದರೇನು?

ಉ– ಪುರುಷ ಮತ್ತು ಸ್ತ್ರೀ ಎಂದು ಗುರುತಿಸಿಕೊಳ್ಳುವ ಪರಿಕಲ್ಪನೆ.

56. ಬಾಲ್ಯವಿವಾಹ ಎಂದರೇನು?

ಉ– 18 ವರ್ಷದೊಳಗಿನ ಹುಡುಗಿ 21 ವರ್ಷದೊಳಗಿನ ಹುಡುಗನಿಗೆ ಮದುವೆ ಮಾಡುವುದು.

## ಭಾರತದ ಪ್ರಾಕೃತಿಕ ಲಕ್ಷಣಗಳು

57. ಮಹಾ ಹಿಮಾಲಯವನ್ನು ಹಿಮಾದ್ರಿ ಎನ್ನಲು ಕಾರಣವೇನು?

ಉ– ವರ್ಷವೆಲ್ಲಾ ಹಿಮದಿಂದ ಆವೃತವಾಗಿರುವದರಿಂದ

58. ಕೆ2 ಶಿಖರ ಯಾವ ಪರ್ವತ ಸರಣಿಗಳಲ್ಲಿದೆ?

ಉ– ಕಾರಕೋರಂ ಸರಣಿ.

59. 'ಹಿಮಾಚಲ್' ಎಂದು ಕರೆಯಲ್ಪಡುವ ಸರಣಿಗಳು.

ಉ– ಒಳ ಹಿಮಾಲಯ ಸರಣಿಗಳು.

60. ಹಿಮಾಲಯದ ಪಾದ ಭಾಗದ ಸರಣಿಗಳು ಯಾವುವು?

ಉ– ಶಿವಾಲಿಕ್ ಬೆಟ್ಟಗಳು.

61. ಅರಾವಳಿ ಬೆಟ್ಟಗಳಲ್ಲಿ ಎತ್ತರವಾಗಿರುವ ಶಿಖರ ಯಾವುದು?

ಉ– ಗುರುಶಿಖರ

62. ಡೂನ್ಸ ಗಳು ಎಂದರೇನು?

ಉ– ಸಮತಟ್ಟಾದ ತಳವುಳ್ಳ ಕಣಿವೆಗಳು

63. ಪೂರ್ವಘಟ್ಟಗಳ ಎತ್ತರವಾದ ಶಿಖರ ಯಾವುದು?

ಉ– ಅರ್ಮಕೊಂಡ

64. ದಕ್ಷಿಣ ಭಾರತದ ಎತ್ತರವಾದ ಶಿಖರ ಯಾವುದು?

ಉ– ಆಣೈಮುಡಿ

65. ಲಗೂನಗಳು ಎಲ್ಲಿ ಕಂಡುಬರುತ್ತವೆ?

ಉ– ಪೂರ್ವ ಕರಾವಳಿಯಲ್ಲಿ ಕಂಡು ಬರುತ್ತವೆ

66. ಭಾರತದ ಎತ್ತರವಾದ ಪರ್ವತ ಶಿಖರ ಯಾವುದು?

ಉ– ಕೆ2 ಅಥವಾ ಗಾಡ್ವಿನ್ ಆಸ್ಟಿನ್

67. ಪ್ರಪಂಚದ ಎತ್ತರವಾದ ಪರ್ವತ ಶಿಖರ ಯಾವುದು?

ಉ– ಮೌಂಟ್ ಎವರೆಸ್ಟ

68. ಉತ್ತರದ ಮೈದಾನವು ಎಷ್ಟು ವಿಸ್ತಾರವಾಗಿದೆ

ಉ– 7 ಲಕ್ಷ ಚ. ಕಿ. ಮಿ

69. ಉತ್ತರದ ಮೈದಾನ ಹೇಗೆ ನಿರ್ಮಾಣವಾಗಿದೆ?

ಉ– ಸಟ್ಲೆಜ್, ಗಂಗಾ, ಬ್ರಹ್ಮಪುತ್ರ ನದಿಗಳ ಸಂಚಯನದಿಂದ.

70. ಪರ್ಯಾಯ ಪ್ರಸ್ಥಭೂಮಿ ಯಾವ ಯುಗಕ್ಕೆ ಸೇರಿದೆ?

ಉ– ಗೊಂಡ್ವಾನ ಯುಗ.

## ಭಾರತದ ವಾಯುಗುಣ

71. ಭಾರತವು ಯಾವ ಮಾದರಿಯ ವಾಯುಗುಣವನ್ನು ಹೊಂದಿದೆ?

ಉ– ಉಷ್ಣವಲಯದ ಮಾನ್ಸೂನ ಮಾದರಿ ವಾಯುಗುಣ.

72. ಚಳಿಗಾಳದಲ್ಲಿ ಭಾರತದಲ್ಲಿ ಕಡಿಮೆ ಉಷ್ಣಾಂಶ ಇರಲು ಕಾರಣವೇನು?

ಉ– ಸೂರ್ಯನ ಓರೆ ಕಿರಣಗಳು.

73. ಭಾರತದ ಯಾವ ಸ್ಥಳವು ಕಡಿಮೆ ಉಷ್ಣಾಂಶ ಹೊಂದಿದೆ?

ಉ– ಡ್ರಾಸ್

74. ಇಬ್ಬನಿ ಮತ್ತು ಕಾವಳ ಯಾವಾಗ ಕಂಡು ಬರುತ್ತವೆ?

ಉ– ಚಳಿಗಾಲದಲ್ಲಿ

75. ಭಾರತದಲ್ಲಿ ಅತಿ ಶೀತ ಮಾಹೆ ಯಾವುದು?

ಉ– ಜನವರಿ.

76. ಬೇಸಿಗೆಯಲ್ಲಿ ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶವಿರಲು ಕಾರಣವೇನು?

ಉ– ಸೂರ್ಯನ ಲಂಬ ಕಿರಣಗಳು.

77. ಭಾರತದಲ್ಲಿ ಅತಿ ಹೆಚ್ಚು ಉಷ್ಣತೆ ಹೊಂದಿದ ಸ್ಥಳ.

ಉ– ಗಂಗಾನಗರ

78. ಭಾರತದಲ್ಲಿ ಅತಿ ಹೆಚ್ಚು ಮಳೆ ಬೀಳುವ ಸ್ಥಳ ಯಾವುದು?

ಉ– ಮೌಸಿನರಾಮ್

79. ಭಾರತದಲ್ಲಿ ಅತಿ ಕಡಿಮೆ ಮಳೆ ಬಿಳುವ ಸ್ಥಳ ಯಾವುದು?

ಉ– ರಾಜಸ್ಥಾನದ ರೂಯ್ಲಿ.

80. ಭಾರತದಲ್ಲಿ ಯಾವ ಅವಧಿಯಲ್ಲಿ ಹೆಚ್ಚು ಮಳೆಯಾಗುತ್ತದೆ?

ಉ– ನೈರುತ್ಯ ಮಾನ್ಸೂನ ಮಾರುತಗಳ ಕಾಲದಲ್ಲಿ.

81. ಭಾರತದಲ್ಲಿ ಆವರ್ತ ಮಾರುತಗಳು(ಸೈಕ್ಲೋನ್) ಬೀಸುವ ಕಾಲ ಯಾವುದು?

ಉ– ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ.

## ಅಭಿವೃದ್ಧಿ

82. ಆರ್ಥಿಕ ಅಭಿವೃದ್ಧಿ ಎಂದರೇನು?

ಉ– ದೇಶದ ಬಡತನ, ನಿರುದ್ಯೊಗ, ಅಸಮಾನತೆ, ನಿಯಂತ್ರಿಸುವುದಕ್ಕೆ ಆರ್ಥಿಕ ಅಭಿವೃದ್ಧಿ ಎನ್ನುವರು.

83. ಅನಾಭಿವೃದ್ಧಿ ಎಂದರೇನು?

ಉ– ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ಸ್ಥಿತಿಯನ್ನು ಅನಾಭಿವೃದ್ದಿ ಎನ್ನುವರು

84. 'ರಾಷ್ಟ್ರೀಯ ವರಮಾನ ಎಂದರೇನು?

ಉ– ಒಂದು ವರ್ಷದಲ್ಲಿ ದೇಶದಲ್ಲಿ ಉತ್ಪಾದಿಸಿದ ಎಲ್ಲಾ ಸರಕು ಮತ್ತು ಸೇವೆಗಳ ಒಟ್ಟು ಮೊತ್ತ.

85. ಪ್ರೊ.ಕೊಲಿನ್ ಕ್ಲಾರ್ಕ್ ಪ್ರಕಾರ ಆರ್ಥಿಕ ಅಭಿವೃದ್ಧಿ ಎಂದರೇನು?

ಉ– ಜನರ ಆರ್ಥಿಕ ಕಲ್ಯಾಣದ ಹೆಚ್ಚಳ.

86. ನೈಜ ವರಮಾನ ಎಂಬುದರ ಅರ್ಥವೇನು?

ಉ– ಜನರ ಕೊಂಡುಕೊಳ್ಳುವ ಶಕ್ತಿ.

87. ನಿರಂತರ ಅಭಿವೃದ್ಧಿ ಎಂದರೇನು?

ಉ– ಸಂಪನ್ಮೂಲಗಳನ್ನು ಮುಂದಿನ ಪೀಳಿಗೆಗೂ ಸಂರಕ್ಷಿಸುವುದು.

88. ತಲಾ ವರಮಾನ ಎಂದರೇನು?

ಉ– ಒಂದು ದೇಶದ ಜನರ ಸರಾಸರಿ ವರಮಾನ.

## ಗ್ರಾಹಕ ಶಿಕ್ಷಣ ಮತ್ತು ರಕ್ಷಣೆ

89. "ಬಳಕೆದಾರ/ಗ್ರಾಹಕ" ಎಂದರೆ ಯಾರು?

ಉ– ಸರಕು ಮತ್ತ ಸೇವೆಗಳನ್ನು ಬಳಸುವವರೇ ಬಳಕೆದಾರರು

90. 'ಟೆಲಿಷಾಪಿಂಗ್' ಎಂದರೇನು?

ಉ– ಮಾಹಿತಿ ತಂತ್ರಜ್ಞಾನದ ಮೂಲಕ ಮನೆಯಲ್ಲಿಯೇ ಕುಳಿತು ವಸ್ತುಗಳನ್ನು ಕೊಳ್ಳುವುದಕ್ಕೆ ಟೆಲಿಷಾಪಿಂಗ್ ಎನ್ನುತ್ತಾರೆ.

91. ಯಾರನ್ನು ಮಾರುಕಟ್ಟೆಯ ರಾಜನೆನ್ನುವರು?

ಉ– ಗ್ರಾಹಕ

92. ಗ್ರಾಹಕ ಸಂರಕ್ಷಣಾ ಕಾಯ್ದೆ ಯಾವಾಗ ಜಾರಿಗೆ ಬಂದಿತು?

ಉ– 1986ರಲ್ಲಿ

93. 20 ಲಕ್ಷದಿಂದ 1 ಕೋಟಿ ವರೆಗಿನ ದೂರನ್ನು ಯಾವ ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತದೆ?

ಉ– ರಾಜ್ಯ ಗ್ರಾಹಕರ ಆಯೋಗ

94. ಪರಿಹಾರ ಮೊತ್ತ 1 ಕೋಟಿ ಮೀರಿದರೆ ಗ್ರಾಹಕ ಯಾವ ನ್ಯಾಯಾಲಕ್ಕೆ ದೂರು ಸಲ್ಲಿಸಬೇಕು?

ಉ– ರಾಷ್ಟ್ರೀಯ ಆಯೋಗ.

95. ಜಿಲ್ಲಾ ಗ್ರಾಹಕ ಸಂರಕ್ಷಣಾ ಮಂಡಳಿಗೆ ಯಾರು ಅಧ್ಯಕ್ಷರಾಗಿರುತ್ತಾರೆ?

ಉ– ಜಿಲ್ಲಾಧಿಕಾರಿಗಳು.

96. 20 ಲಕ್ಷಗಳವರೆಗಿನ ದೂರು ಸ್ವೀಕರಿಸುವ ಗ್ರಾಹಕ ನ್ಯಾಯಾಲಯ ಯಾವುದು?

ಉ– ಜಿಲ್ಲಾ ವೇದಿಕೆ.

## *ಎರಡು ಅಂಕದ ಪ್ರಶ್ನೆಗಳು*

## ಸ್ವಾತಂತ್ರ್ಯೋತ್ತರ ಭಾರತ

1. ಭಾರತವು ಸ್ವಾತಂತ್ರ್ಯ ನಂತರ ಎದುರಿಸಿದ ಸಮಸ್ಯೆಗಳಾವವು?
   - ಮತೀಯ ಗಲಭೆಗಳು,
   - ನಿರಾಶ್ರಿತರ ಸಮಸ್ಯೆಗಳು,
   - ಹೊಸ ಸರ್ಕಾರ ರಚನೆ
2. ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?
   - ಪ.ಬಂಗಾಳ, ಅಸ್ಸಾಂಗಳಲ್ಲಿ ನಿರಾಶ್ರಿತರಿಗೆ ನೆಲೆ.
   - ಬಾಂಗ್ಲಾ ನಿರಾಶ್ರಿತರಿಗೆ ಬಂಗಾಳದಲ್ಲಿ ನೆಲೆ.
   - ಟಿಬೆಟಿಯನ್ನರಿಗೆ ಬೈಲುಕುಪ್ಪೆಯಲ್ಲಿ 3000ಎಕರೆ ಜಮೀನು.
3. ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ಭಾರತದ ಸಂಸ್ಥಾನಗಳಿಗೆ ನೀಡಿದ 3 ಅವಕಾಶಗಳೇನು?
   - ಭಾರತ ಸೇರಬಹುದು.
   - ಪಾಕಿಸ್ಥಾನ ಸೇರಬಹುದು.
   - ಸ್ವತಂತ್ರವಾಗಿ ಉಳಿಯಬಹುದು.
4. ಹೈದರಾಬಾದ್ ಸಂಸ್ಥಾನ ಭಾರತದಲ್ಲಿ ಹೇಗೆ ವಿಲೀನವಾಯಿತು.
   - ನಿಜಾಮನಿಗೆ ಸ್ವತಂತ್ರವಾಗಿ ಉಳಿಯುವ ಉದ್ದೇಶವಿತ್ತು.
   - ರಜಾಕಾರರ ಬಗ್ಗೆ ಜನರಲ್ಲಿ ವ್ಯಾಪಕ ಪ್ರತಿರೋಧ.
   - ಭಾರತ ಸರ್ಕಾರ ಸೈನ್ಯ ಕಳುಹಿಸಿ ನಿಜಾಮನ ಸೋಲು.
5. ಜುನಾಗಡ್ ಸಂಸ್ಥಾನ ಭಾರತದಲ್ಲಿ ಹೇಗೆ ವಿಲೀನವಾಯಿತು?
   - ನವಾಬನು ಪಾಕಿಸ್ತಾನ ಸೇರುವ ಇಚ್ಛೆ ಹೊಂದಿದ್ದನು.
   - ಆಗ ಪ್ರಜೆಗಳು ದಂಗೆ ಎದ್ದರು
   - ನವಾಬ ರಾಜ್ಯ ಬಿಟ್ಟು ಪಲಾಯನ ಮಾಡಿದನು.
6. ಫ್ರೇಂಚ್ ವಸಾಹತುಗಳನ್ನು ವಿಮುಕ್ತಿಗೊಳಿಸಿದ ರೀತಿಯನ್ನು ವಿವರಿಸಿ.
   - ಪಾಂಡಿಚೇರಿ ಪರವಾಗಿ ಕಾಂಗ್ರೇಸ್ ಹೋರಾಟ
   - 1954 ರಲ್ಲಿ ಭಾರತದಲ್ಲಿ ವಿಲೀನ.
7. ಗೋವಾ ಪೋರ್ಚುಗೀಸರಿಂದ ಹೇಗೆ ಮುಕ್ತಗೊಂಡಿತು?
   - 1955 ರಲ್ಲಿ ಗೋವಾ ವಿಮೋಚನಾ ಹೋರಾಟ.
   - 1961 ರಲ್ಲಿ ಭಾರತದ ಸೈನ್ಯ ಮಧ್ಯೆ ಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು.
8. ರಾಜ್ಯ ಪುನರ್ವಿಂಗಡನಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಯಾರಾಗಿದ್ದರು?
   - ಅಧ್ಯಕ್ಷರು: ಫಜಲ್ ಅಲಿ
   - ಸದಸ್ಯರು: ಕೆ.ಎಮ್.ಫಣಿಕ್ಕರ್, ಹೆಚ್.ಎನ್.ಕುಂಜ್ರು

## 20ನೇ ಶತಮಾನದ ರಾಜಕೀಯ ಆಯಾಮಗಳು.

9. ಒಂದನೇಯ ಮಹಾಯುದ್ಧದ ಎರಡು ಮೈತ್ರೀಕೂಟಗಳು ಯಾವುವು?
   - ಕದನ ಬಾಂದವ್ಯತ್ರಯರು: ಬ್ರಿಟನ್, ಫ್ರಾನ್ಸ್, ರಷ್ಯಾ.
   - ಕದನ ಸೌಹಾರ್ಧತ್ರಯರು: ಜರ್ಮನಿ, ಆಷ್ಟ್ರಿಯ, ಇಟಲಿ
10. ಒಂದನೇಯ ಮಹಾಯುದ್ಧದ ಪರಿಣಾಮಗಳಾವವು?
   - ಆಸ್ಟ್ರೋ-ಹಂಗೇರಿ ರಾಷ್ಟ್ರಗಳು ಅಸ್ತಿತ್ವ ಕಳೆದುಕೊಂಡವು.
   - ಯುರೋಪಿನ ಭೂಪಟ ಬದಲಾಯಿತು.
   - 1919 ರಲ್ಲಿ ರಾಷ್ಟ್ರಸಂಘ ಸ್ಥಾಪನೆಯಾಯಿತು.
11. ರಷ್ಯಾ ಕ್ರಾಂತಿಗೆ ಕಾರಣಗಳೇನು?
   - ಝಾರ್ ದೊರೆಗಳ ದಬ್ಬಾಳಿಕೆ.
   - ಜಪಾನ್ ನಿಂದಾದ ಸೋಲು.
12. ರಷ್ಯಾ ಕ್ರಾಂತಿಯಲ್ಲಿ ಲೆನಿನ್ ಪಾತ್ರವೇನು?
   - ಶಾಂತಿ,ಆಹಾರ,ಭೂಮಿ ಯೋಜನೆಗಳ ಘೋಷಣೆ.
   - ಭೂಮಿ ರೈತರಿಗೆ ಸೇರಿದ್ದು ಎಂದನು.
   - ಶಿಕ್ಷಣ, ಕ್ರೀಡೆ, ಆರೋಗ್ಯ ನೀತಿಗಳನ್ನು ಜಾರಿಗೆ ತಂದನು.
13. ರಷ್ಯಾವನ್ನು ಅಮೆರಿಕಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡುವಲ್ಲಿ ಜೋಸೆಫ್ ಸ್ಟಾಲಿನನ ಪಾತ್ರವೇನು?
   - ಪಂಚವಾರ್ಷಿಕ ಯೋಜನೆಗಳ ಜಾರಿ.
   - ಮೊದಲ ಮಾನವ ಸಹಿತ ಉಪಗ್ರಹ ಉಡಾವಣೆ.
   - ಸಮಾಜವಾದಿ ದೇಶಗಳ ನಾಯಕನಾಗಿ ರಷ್ಯ ಬೆಳೆಯಿತು.
14. ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿಯಲು ಕಾರಣವೇನು?
   - ಗೋರ್ಬಚೇವ್ ಜಾರಿಗೆ ತಂದ ಗ್ಲಾಸ್ತನೋಸ್ತ್ ಮತ್ತು ಪೆರೆಸ್ಟ್ರೋಯಿಕ್ ಸುಧಾರಣೆಗಳು.
15. ನಾಜಿ ಸಿದ್ಧಾಂತ ಜರ್ಮನಿಯನ್ನು ಹಾಳು ಮಾಡಿತು ಹೇಗೆ/ ಹಿಟ್ಲರ್ ನ ನಾಝಿ ಸಿದ್ಧಾಂತದ ಸಾರಾಂಶವೇನು?
   - ಜಗತ್ತಿನಲ್ಲಿ ಆರ್ಯ ಜರ್ಮನ್ ಜನಾಂಗ ಶ್ರೇಷ್ಟವಾದದು.
   - ಆಳಲು ಜರ್ಮನ್ನರು ಮಾತ್ರ ಯೊಗ್ಯರು.
   - ಜರ್ಮನ್ನರ ಸಮಸ್ಯಗಳಿಗೆ ಯಹೂದಿಗಳೇ ಕಾರಣ.
16. ಎರಡನೇಯ ಮಹಾಯುದ್ಧಕ್ಕೆ ಕಾರಣಗಳೇನು?
   - ಮೊದಲ ಮಹಾಯುದ್ಧದ ಅಪಮಾನಕರ ಒಪ್ಪಂದಗಳು.
   - ಉಗ್ರ ರಾಷ್ಟ್ರೀಯವಾದ.
   - ಎರಡು ವಿರುದ್ಧ ಶತ್ರು ಬಣಗಳು
17. ಎರಡನೇಯ ಮಹಾಯುದ್ಧದ ಎರಡು ಮೈತ್ರೀಕೂಟಗಳು ಯಾವುವು?
   - ಮಿತ್ರಬಣ: ಬ್ರಿಟನ್, ಫ್ರಾನ್ಸ್, ರಷ್ಯಾ.
   - ಶತ್ರುಬಣ: ಜರ್ಮನಿ, ಇಟಲಿ, ಜಪಾನ್.
18. ಎರಡನೇಯ ಮಹಾಯುದ್ಧದ ಪರಿಣಾಮಗಳೇನು?
   - ಹೆಚ್ಚಿನ ಸಾವು ನೋವು.
   - ರಾಜಕೀಯ-ಸಾಮಾಜೀಕ ಚಿಂತನೆಗಳ ಬದಲಾವಣೆ.
   - ವಿಶ್ವಸಂಸ್ಥೆ ಸ್ಥಾಪನೆಯಾಯಿತು.
19. ಶೀತಲ ಸಮರ ಸೃಷ್ಟಿಸಿದ ಬಿಕ್ಕಟ್ಟುಗಳಾವುವು?
   - ಕೋರಿಯನ್ನ ಯುದ್ದ.
   - ವಿಯಟ್ನಾಂ ಬಿಕ್ಕಟ್ಟು.
   - ಸೂಯಜ್ ಕಾಲುವೆ ಬಿಕ್ಕಟ್ಟು.

## ಸಾಮಾಜಿಕ ಚಳುವಳಿಗಳು..

20. ಜನಮಂದೆಯ ಸ್ವರೂಪವನ್ನು ತಿಳಿಸಿ.
   - ಜನರ ತಾತ್ಕಾಲಿಕ ವರ್ತನೆಯಾಗಿದೆ.
   - ಸಮಾಜದ ಲೋಪದೋಷಗಳನ್ನು ಸೂಚಿಸುತ್ತದೆ.
   - ಸರ್ಕಾರದ ಯೋಜನೆಗಳ ಬಗ್ಗೆ ಅಸಮಾಧಾನವನ್ನು ಹೊರಹಾಕುತ್ತದೆ.
21. ದೊಂಬಿಯ ಸ್ವರೂಪವನ್ನು ತಿಳಿಸಿ.
   - ಇದಕ್ಕೆ ನಿಶ್ಚಿತ ಗುರಿ ಇರುವುದಿಲ್ಲ.
   - ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಹಾನಿ ಮಾಡುತ್ತದೆ.
   - ಧೀರ್ಘ ಕಾಲ ನಡೆಯಲಾರವು.
22. ಪರಿಸರ ಚಳುವಳಿಗಳನ್ನು ಹೆಸರಿಸಿರಿ.
   - ಚಿಪ್ಕೋ ಚಳುವಳಿ
   - ಅಪ್ಪಿಕೋ ಚಳುವಳಿ.
   - ನರ್ಮದಾ ಬಚಾವೋ ಆಂದೋಲನ.
23. ನರ್ಮದಾ ಬಚಾವೋ ಆಂದೋಲನವನ್ನು ವಿವರಿಸಿ.
   - ಸರ್ದಾರ್ ಯೋಜನೆ ವಿರುದ್ಧ ನಡೆಯಿತು.
   - ಮೇಧಾ ಪಾಟ್ಕರ್ ನೇತೃತ್ವದಲ್ಲಿ ನಡೆಯಿತು.
   - ಅರಣ್ಯ, ಪರಿಸರ, ಜೀವಿಗಳ ರಕ್ಷಣೆಗಾಗಿ ಹೋರಾಟ.
24. ಚಿಪ್ಕೋ ಚಳುವಳಿಯನ್ನು ವಿವರಿಸಿ.
   - ಉತ್ತರ ಪ್ರದೇಶದ 'ರೆನ್ನಿ" ಗ್ರಾಮದಲ್ಲಿ ನಡೆಯಿತು.
   - ಮಹಿಳೆಯರು ಮರಗಳನ್ನು ತಬ್ಬಿಕೊಂಡರು.
   - ಮರ ಕಡಿಯಲು ಸರ್ಕಾರ ನೀಡಿದ್ದ ಅನುಮತಿ ರದ್ದು.

25. ಕರ್ನಾಟಕದ ಅಪ್ಪಿಕೋ ಚಳುವಳಿಯನ್ನು ವಿವರಿಸಿ.

- ಉತ್ತರ ಕನ್ನಡ ಜಿಲ್ಲೆ "ಸಲ್ಯಾನಿ" ಗ್ರಾಮದಲ್ಲಿ ನಡೆಯಿತು.
- ಮರಕಡಿಯಲು ಬಂದಾಗ ಸ್ಥಳಿಯರು ವಿರೋಧಿಸಿದರು.
- ಪರಿಸರದ ಮಹತ್ವ ತಿಳಿಸುವುದು ಉದ್ಧೇಶವಾಗಿತ್ತು.

26. ಕರ್ನಾಟಕದ ಕರಾವಳಿ ತೀರದ ಪರಿಸರ ಚಳುವಳಿಗಳನ್ನು ಹೆಸರಿಸಿ.

- ಕೈಗಾ ವಿರೋಧಿ.
- ಮಂಗಳೂರು ತೈಲ ಕಾರ್ಯಾಗಾರ ವಿರೋಧಿ.
- ಮಂಗಳೂರು ಆರ್ಥಿಕ ವಲಯ ವಿರೋಧಿ.

27. ರೈತ ಸಂಘ/ರೈತ ಚಳುವಳಿಗಳ ಉದ್ದೇಶಗಳೇನು?

- ವೈಜ್ಞಾನಿಕ ಬೆಲೆ ನಿಗದಿ.
- ಗ್ರಾಮಗಳ ಅಭಿವೃದ್ಧಿ
- ಜಪ್ತಿ ಕಾರ್ಯಕ್ರಮ ತಡೆ.

28. ಡಿ.ದೇವರಾಜ ಅರಸು ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದರು. ಸಮರ್ಥಿಸಿ..

- ಗೇಣಿದಾರರನ್ನು ಭೂಮಾಲಿಕರ ಹಿಡಿತದಿಂದ ಬಿಡುಗಡೆ.
- ಮಲ ಹೊರುವ ಪದ್ದತಿ ನಿರ್ಮೂಲನೆ.

29.ಅಸ್ಪೃಶ್ಯತೆ ವಿರೋಧಿ ಚಳುವಳಿಯಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ರವರ ಪಾತ್ರವೇನು?

- ಅಸ್ಪೃಶ್ಯರ ಹಕ್ಕುಗಳ ಪ್ರತಿಪಾದನೆ.
- ಮೂಕನಾಯಕ ಪತ್ರಿಕೆ ಆರಂಭ.
- ಆಳುವ ವರ್ಗವಾಗಬೇಕೆಂದು ಕರೆ.

## ಸಾಮಾಜಿಕ ಸಮಸ್ಯೆಗಳು.

30. ಬಾಲಕಾರ್ಮಿಕತೆಗೆ ಕಾರಣಗಳೇನು?

- ಬಾಲ್ಯ ವಿವಾಹ, ಮಕ್ಕಳ ಸಾಗಾಣಿಕೆ.
- ಕುಟುಂಬದ ಆರ್ಥಿಕ ಸ್ಥಿತಿ
- ಪೊಷಕರ ವಲಸೆ.

31. ಮಕ್ಕಳ ದುಡಿಮೆಯ ಪರಿಣಾಮಗಳಾವವು?

- ಮಕ್ಕಳ ದೈಹಿಕ,ಮಾನಸಿಕ ಬೆಳವಣಿಗೆ ಮೇಲೆ ಪರಿಣಾಮ.
- ಶಿಕ್ಷಣದಿಂದ ವಂಚಿತರಾಗುತ್ತಾರೆ.

32. ಬಾಲಕಾರ್ಮಿಕತನ ನಿಯಂತ್ರಣ ಕ್ರಮಗಳನ್ನು ಸೂಚಿಸಿ.

- ಶೇಕಡಾ 100 ಶಾಲಾ ದಾಖಲಾತಿ.
- ನಿರಂತರ ಶಿಕ್ಷಣ.
- ವಲಸೆ ತಡೆ.

33. ಹೆಣ್ಣು ಭ್ರೂಣಹತ್ಯೆಯನ್ನು ಹೇಗೆ ತಡೆಯಬಹುದು?

- ಮಹಿಳೆಯರಿಗೆ ಸಮಾನ ಅವಕಾಶ ನೀಡುವುದು..
- ಹೆಣ್ಣು ಭ್ರೂಣಹತ್ಯೆ ತಡೆಯಲು 1994 ರಲ್ಲಿ ಕಾಯ್ದೆ.

34. ಲಿಂಗ ತಾರತಮ್ಯದ ಪ್ರಕಾರಗಳಾವವು?

- ಜನನ ಪ್ರಮಾಣದಲ್ಲಿ ಅಸಮಾನತೆ.
- ಕೌಟುಂಬಿಕ ಅಸಮಾನತೆ.
- ಒಡೆತನದ ಅಸಮಾನತೆ.

35 ಹಸಿವಿನ ಸೂಚಕ ಆಧರಿಸಿರುವ 3 ಅಂಶಗಳು ಯಾವುವು?

- ಕನಿಷ್ಟ ಕ್ಯಾಲೋರಿ ಪ್ರಮಾಣ.
- ಕಡಿಮೆ ತೂಕ ಪ್ರಮಾಣ.
- ಮಕ್ಕಳ ಮರಣ ದರ.

36. ಬಾಲ್ಯವಿವಾಹವನ್ನು ಏಕೆ ಮಾಡಬಾರದು?

- ಕಾನೂನು ಪ್ರಕಾರ ಅಪರಾಧ..
- ಹೆಣ್ಣಿನ ಗರ್ಭಕೋಶ ಬೆಳೆಯಲು 18 ವರ್ಷ ತುಂಬಿರಬೇಕು.

37. ಬಾಲ್ಯವಿವಾಹಕ್ಕೆ ಕಾರಣಗಳೇನು?

- ಲಿಂಗ ತಾರತಮ್ಯ.
- ಬೇಗ ಮದುವೆ ಮಾಡಿ ಕಳಿಸಬೇಕೆಂಬ ನಂಬಿಕೆ.
- ಸಾರ್ವಜನಿಕರ ಅಸಹಕಾರ.

38. ಬಾಲ್ಯ ವಿವಾಹದ ಪರಿಣಾಮಗಳೇನು?

- ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತ.
- ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ.

39. ಬಾಲ್ಯ ವಿವಾಹ ನಿಷೇಧ ಕಾಯ್ದೆಯ ಅಂಶಗಳೇನು?

- ಕಡಿಮೆ ವಯಸ್ಸಿನ ಹೆಣ್ಣು ಗಂಡಿನ ಮದುವೆ ಅಪರಾಧ.
- ಮಾಡಿಸಿದವರು, ಭಾಗವಿಸಿದವರೂ ಅಪರಾಧಿಗಳು

40. ಮಕ್ಕಳ ಸಾಗಾಣಿಕೆಯ ಪರಿಹಾರ ಕ್ರಮಗಳನ್ನು ತಿಳಿಸಿ.

- ಶಾಲೆಗಳಲ್ಲಿ ಮಕ್ಕಳ ಕ್ಲಬ್ ರಚನೆ ಮಾಡುವುದು.
- ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ಸಮಿತಿ ರಚಿಸುವುದು.
- ಗ್ರಾಮ ಪಂಚಾಯತಿಗಳಲ್ಲಿ "ಮಕ್ಕಳ ಗ್ರಾಮ ಸಭೆ".

## ಭಾರತದ ಪ್ರಾಕೃತಿಕ ಲಕ್ಷಣಗಳು

41. ಭಾರತದ 4 ಪ್ರಾಕೃತಿಕ ಲಕ್ಷಣಗಳನ್ನು ಹೆಸರಿಸಿ.

- ಉತ್ತರದ ಪರ್ವತಗಳು
- ಉತ್ತರದ ಮೈದಾನ
- ಪರ್ಯಾಯ ಪ್ರಸ್ಥಭೂಮಿ.
- ಕರಾವಳಿ ಮೈದಾನ

42. ಮಹಾ ಹಿಮಾಲಯದ ಪ್ರಮುಖ ಶಿಖರಗಳನ್ನು ಹೆಸರಿಸಿ.

- ಮೌಂಟ್ ಎವರೆಸ್ಟ್.
- ಕೆ2
- ಕಾಂಚನಗಂಗಾ

43. ಹಿಮಾಲಯದ ಪ್ರಾಮುಖ್ಯತೆ ಅಥವಾ ಮಹತ್ವ ವಿವರಿಸಿ

- ನೈಸರ್ಗಿಕ ಗಡಿಗಳಾಗಿವೆ.
- ಪರಕಿಯರ ದಾಳಿಯಿಂದ ರಕ್ಷಿಸುತ್ತದೆ.
- ನದಿಗಳ ಉಗಮ.

44. ಒಳ ಹಿಮಾಲಯದ ಆಕರ್ಷಕ ಕಣಿವೆ ಮತ್ತು ಗಿರಿಧಾಮಗಳನ್ನು ಹೆಸರಿಸಿ.

- ಕಣಿವೆಗಳು: ಕಾಶ್ಮೀರ, ಕಾಂಗ್ರಾ, ಕುಲು.
- ಗಿರಿಧಾಮಗಳು: ಶಿಮ್ಲಾ, ರಾಣಿಖೇತ್, ಮಸ್ಸೂರಿ.

45. ಉತ್ತರದ ಮೈದಾನದ ಪ್ರಾಮುಖ್ಯತೆ ತಿಳಿಸಿ

- ಕೃಷಿಗೆ ಉಪಯುಕ್ತ
- ರಸ್ತೆ, ರೈಲು, ನಿರ್ಮಾಣಕ್ಕೆ ಯೋಗ್ಯವಾಗಿದೆ
- ಅನೇಕ ಯಾತ್ರಾ ಸ್ಥಳಗಳಿವೆ

46. ಪರ್ಯಾಯ ಪ್ರಸ್ಥಭೂಮಿಯ ಪ್ರಮುಖ ಬೆಟ್ಟಗಳಾವುವು?

- ಅರಾವಳಿ.
- ವಿಂದ್ಯಾ.
- ಸಾತ್ಪುರ

47. ಪರ್ಯಾಯ ಪ್ರಸ್ಥಭೂಮಿಯ ಆರ್ಥಿಕ ಮಹತ್ವ ವಿವರಿಸಿ

- ದಟ್ಟವಾದ ಅರಣ್ಯ ಮತ್ತು ವನ್ಯಪ್ರಾಣಿಗಳಿವೆ.
- ಖನಿಜ ಸಂಪನ್ಮೂಲಗಳ ಆಗರವಾಗಿದೆ.

48. ಪಶ್ಚಿಮ ಕರಾವಳಿಯ 3 ಭಾಗಗಳು ಯಾವುವು?

- ಕೊಂಕಣ ತೀರ(ಗುಜರಾತ್/ಮಹಾರಾಷ್ಟ್ರ)
- ಕರ್ನಾಟಕ ತೀರ(ಗೋವಾ/ಕರ್ನಾಟಕ)
- ಮಲಬಾರ್ ತೀರ(ಕೇರಳ)

49. ಕರಾವಳಿ ಮೈದಾನದ ಪ್ರಾಮುಖ್ಯತೆ ವಿವರಿಸಿ

- ನೈಸರ್ಗಿಕ ಬಂದರುಗಳಿವೆ
- ಪ್ರವಾಸೋದ್ಯಮ ಅಭಿವೃದ್ದಿ
- ಮೀನುಗಾರಿಕೆ ಅಭಿವೃದ್ಧಿ

50. ಪಶ್ಚಿಮ ಮತ್ತು ಪೂರ್ವ ಘಟ್ಟಗಳ ವ್ಯತ್ಯಾಸ ಬರೆಯಿರಿ

| ಪಶ್ಚಿಮ ಘಟ್ಟಗಳು | ಪೂರ್ವ ಘಟ್ಟಗಳು |
|---|---|
| 1 ನಿರಂತರವಾಗಿವೆ<br>2 ಎತ್ತರವಾಗಿವೆ | 1 ನಿರಂತರವಾಗಿಲ್ಲ<br>2 ಎತ್ತರವಾಗಿಲ್ಲ |

51. ಪಶ್ಚಿಮ ಕರಾವಳಿ ಹಾಗೂ ಪೂರ್ವ ಕರಾವಳಿ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ

| ಪಶ್ಚಿಮ ಕರಾವಳಿ | ಪೂರ್ವ ಕರಾವಳಿ |
|---|---|
| 1 ಕಿರಿದಾಗಿದೆ.<br>2 ಕಡಿದಾಗಿದೆ.<br>3 ಅಳಿವೆಗಳಿವೆ | 1 ಅಗಲವಾಗಿದೆ.<br>2 ನದಿ ಮುಖಜ ಭೂಮಿ<br>3 ಲಗೂನಗಳಿವೆ |

52. ಲಕ್ಷ ದ್ವೀಪಗಳು ಮತ್ತು ಅಂಡಮಾನ & ನಿಕೋಬಾರ ದ್ವೀಪಗಳು ನಡುವಿನ ವ್ಯತ್ಯಾಸಗಳನ್ನು ಬರೆಯಿರಿ

| ಲಕ್ಷ ದ್ವೀಪಗಳು | ಅಂಡಮಾನ & ನಿಕೋಬಾರ ದ್ವೀಪಗಳು |
|---|---|
| 1. 43 ದ್ವೀಪಗಳಿವೆ<br>2. ಹವಳ ದ್ವೀಪಗಳು | 1. 204 ದ್ವೀಪಗಳಿವೆ<br>2. ಜ್ವಾಲಾಮುಖಿಗಳಿಂದಾಗಿವೆ |

## ಭಾರತದ ವಾಯುಗುಣ

53. ಭಾರತದ ವಾಯುಗುಣದ 4 ಋತುಗಳಾವುವು?

- ಚಳಿಗಾಲ (ಡಿಸೆಂಬರ್ ನಿಂದ ಫೆಬ್ರುವರಿ)
- ಬೇಸಿಗೆಕಾಲ(ಮಾರ್ಚ್ ನಿಂದ ಮೇ)
- ಮಳೆಗಾಲ (ಜೂನ್ ನಿಂದ ಸೆಪ್ಟಂಬರ್)
- ಈಶಾನ್ಯ ಮಾರುತಗಳ ಕಾಲ (ಅಕ್ಟೋಬರ್ ನವೆಂಬರ್)

54. ಭಾರತದಲ್ಲಿ ಚಳಿಗಾಲದ ವಾಯುಗುಣ ವಿವರಿಸಿ.

- ಕಡಿಮೆ ಉಷ್ಣಾಂಶ
- ಕಡಿಮೆ ಆರ್ದ್ರತೆ.
- ಮೋಡ ಕವಿದ ಆಕಾಶ.

55. ಬೆಸಿಗೆಯಲ್ಲಿ ಬಿಳುವ ವಿವಿಧ ರಾಜ್ಯಗಳಲ್ಲಿ ಏನೆಂದು ಕರೆಯುತ್ತಾರೆ?

- ಕೆರಳದಲ್ಲಿ ಮಾವಿನ ಹೊಯ್ಲು
- ಕರ್ನಾಟಕದಲ್ಲಿ ಕಾಫಿ ಹೂ ಮಳೆ
- ಉತ್ತರ ಪ್ರದೇಶದಲ್ಲಿ ಆಂಧಿಸ್
- ಪಶ್ಚಿಮ ಬಂಗಾಳದಲ್ಲಿ ಕಾಲ ಬೈಸಾಕಿ

56. ಜೂನ್ ವೇಳೆಗೆ ಮಾನ್ಸೂನ್ ಮಾರುತಗಳು ನೈಋತ್ಯದಿಂದ ಭಾರತದ ಕಡೆಗೆ ಬೀಸಲು ಕಾರಣವೇನು?

- ಭಾರತದ ಮದ್ಯಭಾಗದಲ್ಲಿ ಡಿಮೆ ಒತ್ತಡ.
- ಅರಬ್ಬಿ ಸಮುದ್ರದಲ್ಲಿ ಹೆಚ್ಚು ಒತ್ತಡ.

57.ಪಶ್ಚಿಮ ಘಟ್ಟಗಳ ಪೂರ್ವ ಭಾಗ ಮಳೆ ನೆರಳಿನ ಪ್ರದೇಶ.ಏಕೆ?

- ಮಾರುತಗಳು ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಸುರಿಸುತ್ತವೆ
- ಪೂರ್ವಕ್ಕೆ ಹೋದಂತೆ ಮಳೆ ಕಡಿಮೆಯಾಗುತ್ತದೆ.

58. ಅಕ್ಟೋಬರ್ ತಿಂಗಳಿನಿಂದ ಮಾರುತಗಳು ಭಾರತದಿಂದ ನಿರ್ಗಮಿಸಲು ಕಾರಣವೇನು?

- ಭಾರತದ ಮದ್ಯ ಭಾಗದಲ್ಲಿ ಹೆಚ್ಚು ಒತ್ತಡ.
- ಅರಬ್ಬಿ ಸಮುದ್ರದಲ್ಲಿ ಕಡಿಮೆ ಒತ್ತಡ.

59. ಭಾರತದಲ್ಲಿ ಅತಿ ಹೆಚ್ಚು ಮಳೆ ಬೀಳುವ ಸ್ಥಳಗಳಾವವು?

- ಪಶ್ಚಿಮ ಘಟ್ಟಗಳು, ಹಿಮಾಚಲ ಪ್ರದೇಶ, ಈಶಾನ್ಯ ರಾಜ್ಯಗಳು, ಪಶ್ಚಿಮ ಕರಾವಳಿ, ಪಶ್ಚಿಮ ಬಂಗಾಳ,

60. ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಸ್ಥಳಗಳಾವವು?

- ರಾಜಸ್ಥಾನ, ಪಂಜಾಬ, ಹರಿಯಾಣ,
- ಗುಜರಾತ, ಕಛ ಕರಾವಳಿ

61. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವವು?

- ಸ್ಥಾನ, ಎತ್ತರ,
- ಮಾರುತಗಳು, ಸಾಗರದಿಂದ ಇರುವ ದೂರ

## ಅಭಿವೃದ್ಧಿ

62. ಅನಾಭಿವೃದ್ಧಿಯ ಲಕ್ಷಣಗಳಾವವು?

- ಉತ್ಪಾದನೆ ಕಡಿಮೆ
- ಜನಸಂಖ್ಯೆ ಹೆಚ್ಚಳ
- ಕಡಿಮೆ ತಲಾವರಮಾನ

63. ತಲಾ ವರಮಾನ ಅಭಿವೃದ್ಧಿಯ ನೈಜ ಮಾಪಕವಾಗಲಾರದು. ಏಕೆ?

- ವರಮಾನದ ಸಮಾನ ಹಂಚಿಕೆ ತೋರಿಸುವುದಿಲ್ಲ.
- ಆಹಾರ, ವಸತಿ, ಶಿಕ್ಷಣ ಪರಿಗಣಿಸುವುದಿಲ್ಲ.

64. ಮಾನವ ಅಭಿವೃದ್ಧಿ ಸೂಚ್ಯಾಂಕ ಆಧರಿಸಿರುವ 3 ಅಂಶಗಳಾವವು?

- ನಿರೀಕ್ಷಿತ ಜೀವಿತಾವಧಿ
- ಸಾಕ್ಷರತೆ ಪ್ರಮಾಣ
- ತಲಾ ವರಮಾನ

65. ಮಹಿಳೆಯರ ಸಬಲೀಕರಣಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

- ಕಠಿಣ ಕಾನೂನು ಕ್ರಮಗಳು
- ಸಮಾನ ವೇತನ
- ಸ್ಥಳಿಯ ಸಂಸ್ಥೆಗಳಲ್ಲಿ ಮಿಸಲಾತಿ

## ಗ್ರಾಹಕ ಶಿಕ್ಷಣ ಮತ್ತು ರಕ್ಷಣೆ

66. ಗ್ರಾಹಕರ ಶೋಷಣೆ/ಕಷ್ಟ ನಷ್ಟಗಳಿಗೆ ಕಾರಣಗಳೇನು?

- ಉತ್ಪಾದಕ ಗ್ರಾಹಕರ ನಡುವಿನ ಅಂತರ.
- ಮದ್ಯವರ್ತಿಗಳ ಪ್ರಭಾವ

67. ಗ್ರಾಹಕರ ರಕ್ಷಣೆಗಾಗಿ ಇರುವ ಕಾಯ್ದೆಗಳಾವುವು?

- ಗ್ರಾಹಕ ಸಂರಕ್ಷಣಾ ಕಾಯ್ದೆ.
- ಅಗತ್ಯ ವಸ್ತುಗಳ ಕಾಯ್ದೆ.
- ತೂಕ ಮತ್ತು ಅಳತೆ ಕಾಯ್ದೆ.

68. ವಿಶ್ವ ಗ್ರಾಹಕರ ದಿನಾಚರಣೆಯನ್ನು ಮಾರ್ಚ್ 15 ರಂದು ಆಚರಿಸಲು ಕಾರಣವೇನು?

- ಅಮೆಕಾದ ಅಧ್ಯಕ್ಷ ಜಾನ್ ಎಫ್. ಕೆನಡಿ ಆ ದಿನ ತನ್ನ ನಾಗರಿಕರಿಗೆ ಸುರಕ್ಷತೆ, ಮಾಹಿತಿ, ನಿವೇದನೆ ಮತ್ತು ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡಿದ್ದು.

69. ಗ್ರಾಹಕ ಸಂರಕ್ಷಣಾ ಕಾಯ್ದೆ ಯ ಉದ್ದೇಶಗಳಾವವು?

- ಸುರಕ್ಷತೆ ಮತ್ತು ಗುಣಮಟ್ಟ
- ತೂಕ, ಅಳತೆಗಳ ಮೇಲೆ ನಿಗಾ ವಹಿಸುವುದು

70. ಗ್ರಾಹಕ ಸಂರಕ್ಷಣಾ ಕಾಯಿದೆ ಗ್ರಾಹಕರ ಯಾವ ಹಕ್ಕುಗಳನ್ನು ಕಾಪಾಡುತ್ತದೆ

- ರಕ್ಷಣೆಯ ಹಕ್ಕು.
- ಮಾಹಿತಿ ಹಕ್ಕು.
- ಆಯ್ಕೆಯ ಹಕ್ಕು.

71. ಗ್ರಾಹಕ ಸಂರಕ್ಷಣೆಗೆ ನಿರ್ಮಿಸಿದ ವೇದಿಕೆಗಳಾವವು?

- ಜಿಲ್ಲಾ ಗ್ರಾಹಕರ ವೇದಿಕೆ
- ರಾಜ್ಯ ಆಯೋಗ
- ರಾಷ್ಟ್ರೀಯ ಆಯೋಗ

72. ಗ್ರಾಹಕ ನ್ಯಾಯಾಲಕ್ಕೆ ದೂರು ಸಲ್ಲಿಸುವಾಗ ಯಾವ ಮಾಹಿತಿ ಒಳಗೊಂಡಿರಬೇಕು?

- ದೂರು ಬೆರಳಚ್ಚು ಅಥವಾ ಕೈಬರಹದಲ್ಲಿರಬೇಕು.
- ದೂರುದಾರನ ಹೆಸರು, ವಿಳಾಸ, & ದೂರವಾಣಿ ಸಂಖ್ಯೆ ಸರಿಯಾಗಿರಬೇಕು
- ಯಾರ ವಿರುದ್ಧ ದೂರು ಕೊಡಬೇಕೆಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು

## ಮೂರು ಅಂಕದ ಪ್ರಶ್ನೆಗಳು

### ಕರ್ನಾಟಕದಲ್ಲಿ ಬ್ರಿಟೀಷ್ ಆಳ್ವಿಕೆಗೆ ಪ್ರತಿರೋಧಗಳು

1. ಭಾರತದ ಇತಿಹಾಸದಲ್ಲಿ 18 ನೇ ಶತಮಾನ "ರಾಜಕೀಯ ಸಮಸ್ಯೆಗಳ ಶತಮಾನ" ಎಂದು ಚಿತ್ರಿಸಲ್ಪಟ್ಟಿದೆ. ಕಾರಣಗಳೇನು?
   - ಔರಂಗಜೇಬನ ಮರಣ.
   - ಮೊಘಲರ ಅವನತಿ.
   - ಕರ್ನಾಟಿಕ್ ದಲ್ಲಿ ಅಧಿಕಾರಕ್ಕೆ ಕಿತ್ತಾಟ.
   - ಚಿಕ್ಕದೇವರಾಜರ ಮರಣ.
   - ಮೈಸೂರಿನಲ್ಲಿ ರಾಜಕೀಯ ಸಮಸ್ಯೆ.
2. ಹೈದರಲಿ ಹೇಗೆ ಅಧಿಕಾರಕ್ಕೆ ಬಂದನು?/ ಹೈದರಲಿ ಹೇಗೆ ಏಳಿಗೆ ಹೊಂದಿದನು?
   - ಚಾಣಾಕ್ಷ ಮತ್ತು ಶಸ್ತ್ರ ಪ್ರಯೋಗದಲ್ಲಿ ಖ್ಯಾತ.
   - ಸೈನಿಕನಾಗಿ ಮೈಸೂರು ಸೈನ್ಯಕ್ಕೆ ಸೇರಿದ.
   - ದೇವನಹಳ್ಳಿ ಮುತ್ತಿಗೆಯಲ್ಲಿ ಪ್ರಮುಖ ಪಾತ್ರ.
   - ದಳವಾಯಿಗಳ ಬಲ ಕುಂದಿಸಿ ಅಧಿಕಾರಕ್ಕೆ ಬಂದ
3. ಮೊದಲನೇ ಆಂಗ್ಲೋ ಮೈಸೂರು ಯುದ್ಧದ ಕಾರಣ/ಘಟನೆ/ಪರಿಣಾಮಗಳನ್ನು ಬರೆಯಿರಿ.
   - ಕಾರಣ : ಹೈದರಲಿಯ ಪ್ರಾಬಲ್ಯ ಬ್ರಿಟೀಷರು ಸಹಿಸದೇ ಇರುವುದು.
   - ಘಟನೆಗಳು : 1767 ರಲ್ಲಿ ಹೈದರ್ ಆರ್ಕಾಟ್ ಮುತ್ತಿಗೆ.
   - ತಿರುಚನಾಪಳ್ಳಿ, ಅಂಬೂರುಗಳಲ್ಲಿ ಯುದ್ಧ.
   - ಹೈದರ್ ನಿಂದ ಅನೇಕ ಸ್ಥಳಗಳ ವಶ.
   - ಪರಿಣಾಮಗಳು: 1769 ರಲ್ಲಿ ಮದ್ರಾಸ್ ಒಪ್ಪಂದ.
4. ಎರಡನೇ ಆಂಗ್ಲೋಮೈಸೂರು ಯುದ್ಧದ ಕಾರಣ/ಘಟನೆ/ಪರಿಣಾಮಗಳನ್ನು ಬರೆಯಿರಿ.
   - ಕಾರಣ : ಬ್ರಿಟೀಷರಿಂದ ಮದ್ರಾಸ್ ಒಪ್ಪಂದ ಉಲ್ಲಂಘನೆ.
   - ಘಟನೆಗಳು : ಹೈದರ್ ನಿಂದ ಕಂಚೀಪುರ, ಆರ್ಕಾಟ್ ವಶ.
   - ಸರ್ ಐರ್ ಕೂಟ್ ದಾಳಿ.
   - ಟಿಪ್ಪುವಿನಿಂದ ಮಂಗಳೂರು ವಶ
   - ಪರಿಣಾಮಗಳು: 1784 ರಲ್ಲಿ ಮಂಗಳೂರು ಒಪ್ಪಂದ.
5. ಮೂರನೇ ಆಂಗ್ಲೋಮೈಸೂರು ಯುದ್ಧದ ಕಾರಣ/ಘಟನೆ/ಪರಿಣಾಮಗಳನ್ನು ಬರೆಯಿರಿ.
   - ಕಾರಣ : ತಿರುವಾಂಕೂರು ರಾಜ ಕಾಂಗನೂರು ಪಡೆದದ್ದು.
   - ಘಟನೆಗಳು : ಬ್ರಿಟೀಷರಿಂದ ಕಾರವಾರ, ದಿಂಡಿಗಲ್ ವಶ.
   - ಟಿಪ್ಪುವಿನಿಂದ ಸತ್ಯಮಂಗಲ ವಶ.
   - ಬ್ರಿಟೀಷರಿಂದ ಶ್ರೀರಂಗಪಟ್ಟಣ ಕೋಟೆ ಮುತ್ತಿಗೆ.
   - ಪರಿಣಾಮಗಳು: ಟಿಪ್ಪು ಅರ್ಧ ರಾಜ್ಯ ಬಿಟ್ಟುಕೊಡಬೇಕಾಯಿತು.
   - ಇಬ್ಬರು ಮಕ್ಕಳನ್ನು ಒತ್ತೆ ಇಡಬೇಕಾಯಿತು.
6. ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ಕಾರಣ/ಘಟನೆ/ಪರಿಣಾಮಗಳನ್ನು ಬರೆಯಿರಿ.
   - ಕಾರಣ : ಟಿಪ್ಪು ಫ್ರೆಂಚರ ಸಹಾಯ ಪಡೆದದ್ದು.
   - ಟಿಪ್ಪು ಹೊಸ ಷರತ್ತುಗಳನ್ನು ಒಪ್ಪದೇ ಇದ್ದದ್ದು.
   - ಘಟನೆಗಳು : ಬ್ರಿಟೀಷರು ಕೋಟೆ ಭೇಧಿಸಿದರು.
   - ಟಿಪ್ಪು ಹೋರಾಡುತ್ತಲೇ ವೀರಮರಣ.
   - ಪರಿಣಾಮಗಳು: ಟಿಪ್ಪುವಿನ ಪ್ರದೇಶಗಳು ಬ್ರಿಟೀಷರು, ನಿಜಾಮ, ಮರಾಠರಲ್ಲಿ ಹಂಚಿಕೆ
   - ಒಂದು ಸಣ್ಣ ಪ್ರದೇಶ ಮೈಸೂರು ಒಡೆಯರಿಗೆ
7. ದೋಂಢಿಯಾ ವಾಘ್ ನ ಹೋರಾಟ ವಿವರಿಸಿ.
   - ಸೈನ್ಯ ಸಂಘಟಿಸಿ ಬ್ರಿಟೀಷರ ವಿರುದ್ಧ ಬಂಡಾಯ.
   - ಶಿವಮೊಗ್ಗ, ಬಿದನೂರು ವಶ.
   - ಚಿತ್ರದುರ್ಗ ಗೆಲಲ್ಲು ಪ್ರಯತ್ನ.
   - ಶಿಕಾರಿಪುರ ಪುನಃ ವಶ.
   - ಕೋನಗಲ್ ನಲ್ಲಿ ಬ್ರಿಟೀಷರಿಂದ ಹತ್ಯೆ.
8. ಕಿತ್ತೂರಿನ ರಾಣಿ ಚೆನ್ನಮ್ಮಳ ಹೋರಾಟ ವಿವರಿಸಿ.
   - ದತ್ತು ನೀತಿ ವಿರುದ್ಧ ಹೋರಾಟ.
   - ಥ್ಯಾಕರೆಯಿಂದ ಕಿತ್ತೂರು ವಶಕ್ಕೆ ಪ್ರಯತ್ನ.
   - ರಾಣಿ ಚೆನ್ನಮ್ಮಳಿಂದ ಸೋತ ಥ್ಯಾಕರೆ ಮರಣ.
   - ಡೀಕ್ ನೇತೃತ್ವದ ಸೈನ್ಯದ ವಿರುದ್ಧ ವೀರತನದಿಂದ ಹೋರಾಟ.
   - ಚೆನ್ನಮ್ಮಳ ಸೆರೆ.
9. ಸಂಗೊಳ್ಳಿ ರಾಯಣ್ಣ ಒಬ್ಬ ಅಪ್ರತಿಮ ದೇಶ ಭಕ್ತ. ಸಮರ್ಥಿಸಿ/ ರಾಯಣ್ಣನ ಹೋರಾಟ ವಿವರಿಸಿ.
   - ಚೆನ್ನಮ್ಮಳ ಜೊತೆ ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಟ.
   - ಸೈನ್ಯ ಸಂಘಟನೆ.

- ಗುಪ್ತ ಸಭೆಗಳು
- ಬ್ರಿಟೀಷರ ಖಜಾನೆ ಲೂಟಿ.
- ಸಂಪಗಾವಿ, ಖಾನಾಪುರಗಳಲ್ಲಿ ಕಾರ್ಯಾಚರಣೆ.

10. ಅಮರಸುಳ್ಯದ ರೈತ ಹೋರಾಟದ ಬಗ್ಗೆ ವಿವರಿಸಿ.
    - ಕೊಡಗಿನಲ್ಲಿ ಅಪರಾಂಪರ, ಕಲ್ಯಾಣಸ್ವಾಮಿ ಮತ್ತು ಪುಟ್ಟಬಸಪ್ಪ ಹೋರಾಟ.
    - ಪುಟ್ಟಬಸಪ್ಪ ಬಂಡುಕೋರರನ್ನು ಸಂಘಟಿಸಿದ.
    - ಸರ್ಕಾರಿ ಕಛೇರಿಗಳ ವಶ, ಅಧಿಕಾರಿಗಳ ಬಂಧನ.
    - ಜೈಲು ಖಜಾನೆಗಳ ಲೂಟಿ.
    - ಪಾಣಿ ಮಂಗಳೂರು, ಬಂಟ್ವಾಳದಲ್ಲಿ ಕಾರ್ಯಾಚರಣೆ.

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

11. 1857 ರ ದಂಗೆಗೆ ರಾಜಕೀಯ ಕಾರಣಗಳನ್ನು ಬರೆಯಿರಿ.
    - ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ.
    - ಸತಾರ, ಝಾನ್ಸಿ ಮೊದಲಾದ ರಾಜ್ಯಗಳು ಬ್ರಟಿಷರ ವಶ.
    - ನವಾಬರ ರಾಜ ಪದವಿ ರದ್ದು.
    - ಮೊಘಲ್ ಮತ್ತು ಔಧ್ ನ ರಾಜರ ಪದಚ್ಯುತಿ.
    - ಲಕ್ಷಾಂತರ ಸೈನಿಕರ ನಿರುದ್ಯೋಗ.
12. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಕಾರಣಗಳನ್ನು ಬರೆಯಿರಿ.
    - ಇಂಗ್ಲೆಡ್ ನ ಕೈಗಾರಿಕಾ ಕ್ರಾಂತಿ.
    - ಭಾರತದ ಕರಕುಶಲ ಕೈಗಾರಿಕೆಗಳ ನಾಶ.
    - ಕರಕುಶಲಗಾರರ ನಿರುದ್ಯೋಗ.
    - ಕಂದಾಯ ನೀತಿಗಳಿಂದ ರೈತರ ಶೋಷಣೆ.
    - ಇನಾಂ ಭೂಮಿ ವಾಪಸ್ಸು ಪಡೆದದ್ದು.
13. ಸಿಪಾಯಿ ದಂಗೆಯ ವಿಫಲತೆಗೆ ಕಾರಣಗಳೇನು?
    - ಇಡೀ ಭಾರತ ವ್ಯಾಪಿಸಿರಲಿಲ್ಲ.
    - ಯೋಜಿತ ದಂಗೆಯಾಗಿರಲಿಲ್ಲ.
    - ಒಗ್ಗಟ್ಟು, ಶಿಸ್ತಿನ ಕೊರತೆ.
    - ಹಲವು ದೊರೆಗಳಿಂದ ಬ್ರಟಿಷರಿಗೆ ಬೆಂಬಲ.
    - ಸಿಪಾಯಿಗಳ ತಪ್ಪು ನಡೆಗಳು.
14. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ/1857ರ ದಂಗೆಯ ಪರಿಣಾಮಗಳೇನು?
    - ಕಂಪನಿ ಆಳ್ವಿಕೆ ಕೊನೆ.
    - ರಾಣಿಯ ನೇರ ಆಡಳಿತ.
    - ರಾಣಿಯಿಂದ ಸುಭದ್ರ ಸರಕಾರದ ಘೋಷಣೆ.
    - ಭಾರತೀಯರ ಬೆಂಬಲಗಳಿಸುವ ಅರಿವು ಬ್ರಟಿಷರಿಗೆ.
    - ಪರ್ಯಾಯ ಹೋರಾಟದ ಅರಿವು.
15. 1858ರ ಬ್ರಿಟನ್ ರಾಣಿಯ ಘೋಷಣೆಯ ಅಂಶಗಳಾವುವು?
    - ದೇಶೀಯ ರಾಜರ ಒಪ್ಪಂದಗಳ ಅಂಗೀಕಾರ.
    - ವಿಸ್ತರಣೆ ಕೈಬಿಡುವುದು.
    - ಸುಭದ್ರ ಸರಕಾರದ ಭರವಸೆ.
    - ಕಾನೂನಿನ ಮುಂದೆ ಸಮಾನತೆ.
    - ಧಾರ್ಮಿಕ ಸಹಿಷ್ಣುತೆ.

## ಸಾಮಾಜಿಕ ಸ್ತರ ವಿನ್ಯಾಸ

16. ಶೈಕ್ಷಣಿಕ ಅಸಮಾನತೆ ನಿವಾರಣೆಗೆ ಇರುವ ಸಂವಿಧಾನಿಕ ಅವಕಾಶಗಳಾವುವು?
    - ಉಚಿತ ಮತ್ತು ಕಡ್ಡಾಯ ಶಿಕ್ಷಣ.
    - 21ಎ ವಿಧಿ ಅಡಿ ಶಿಕ್ಷಣ ಮೂಲಭೂತ ಹಕ್ಕು.
    - 30 ನೇ ವಿಧಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಅವಕಾಶ.
    - 46 ನೇ ವಿಧಿ ಹಿಂದುಳಿದ, ಪರಿಶಿಷ್ಟ ಜಾತಿ/ಪಂಗಡಗಳ ಶಿಕ್ಷಣ ಅಭಿವೃದ್ಧಿ.
17. ಅಸ್ಪೃಶ್ಯತೆ ಸಾಮಾಜಿಕ ಪಿಡುಗು. ಹೇಗೆ/ಅಸ್ಪೃಶ್ಯರ ಸಮಸ್ಯೆಗಳೇನು?
    - ಸಾಮಾಜಿಕ ತಿರಸ್ಕಾರ.
    - ಕೆಳಮಟ್ಟದ ಸ್ಥಾನ.
    - ಶಿಕ್ಷಣದಿಂದ ವಂಚಿತರು.
    - ಆಸ್ತಿ ಹಕ್ಕಿನ ನಿರಾಕರಣೆ.
    - ರಾಜಕೀಯ ಹಕ್ಕು ನಿರಾಕರಣೆ.
18. ಅಸ್ಪೃಶ್ಯತೆ ನಿವಾರಣೆಗೆ ಇರುವ ಕಾನೂನಾತ್ಮಕ/ಸಂವಿಧಾನಾನ್ಮತಕ ಕ್ರಮಗಳಾವುವು?
    - 17 ನೇ ವಿಧಿ ಪ್ರಕಾರ ಅಸ್ಪೃಶ್ಯತೆ ನಿಷೇಧ.
    - 1976 ರಲ್ಲಿ ನಾಗರಿಕ ಹಕ್ಕು ಸಂರಕ್ಷಣಾ ಕಾಯ್ದೆ.
    - ಮತದಾನದ ಹಕ್ಕು.
    - ಸಮಾನತೆಯ ಹಕ್ಕು.
    - ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ.

### ದುಡಿಮೆ

19. ಸಂಘಟಿತ ಮತ್ತು ಅಸಂಘಟಿತ ವಲಯದ ದುಡಿಮೆಗಾರರಿಗೆ ಇರುವ ವ್ಯತ್ಯಾಸ ಬರೆಯಿರಿ.

| ಸಂಘಟಿತದುಡಿಮೆಗಾರರು | ಅಸಂಘಟಿತ ದುಡಿಮೆಗಾರರು |
|---|---|
| 1. ಕಾನೂನು ಚೌಕಟ್ಟು.<br>2. ನಿಗದಿತ ಸಮಯ, ವೇತನ.<br>3. ವಿಶೇಷ ಭತ್ಯೆ, ಸೌಲಭ್ಯಗಳಿವೆ.<br>ಉದಾ:ಸರಕಾರಿನೌಕರರು. | 1. ಕಾನೂನು ಚೌಕಟ್ಟುಗಳಿಲ್ಲ.<br>2. ನಿಗದಿತ ಸಮಯ, ವೇತನ ಇಲ್ಲ.<br>3. ವಿಶೇಷ ಭತ್ಯೆ, ಸೌಲಭ್ಯಗಳಿಲ್ಲ.<br>ಉದಾ: ಕೂಲಿ ಕಾರ್ಮಿಕರು. |

20. ಅಸಂಘಟಿತ ವಲಯದ ದುಡಿಮೆಗಾರರ ಸವಾಲುಗಳೇನು?
- ವಲಸೆ.
- ಸಾಮಾಜಿಕ ಅಭದ್ರತೆ.
- ಕಾನೂನು ಚೌಕಟ್ಟುಗಳಿಲ್ಲ.
- ಬಾಲಕಾರ್ಮಿಕತೆ.
- ದೈಹಿಕ, ಮಾನಸಿ ದೌರ್ಜನ್ಯ.

### ಭಾರತದ ಕೈಗಾರಿಕೆಗಳು

21. ಕೈಗಾರಿಕೆಗಳ ಸ್ಥಾನೀಕರಣ ಮತ್ತು ಅಭಿವೃದ್ಧಿ ನಿರ್ಧರಿಸುವ ಅಂಶಗಳು ಯಾವುವು?
- ಕಚ್ಚಾ ವಸ್ತುಗಳ ಪೂರೈಕೆ.
- ಶಕ್ತಿ ಸಂನ್ಮೂಲಗಳ ಪೂರೈಕೆ.
- ಸಾರಿಗೆ, ಸಂಪರ್ಕ ಸೌಲಭ್ಯ.
- ಮಾರುಕಟ್ಟೆ ಸೌಲಭ್ಯ.
- ಬಂಡವಾಳ.
- ಕಾರ್ಮಿಕರ ಲಭ್ಯತೆ.

22. ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಪಟ್ಟಿ ಮಾಡಿ.
- ಕಲ್ಕತ್ತಾ–ಹೂಗ್ಲೀ ಪ್ರದೇಶ.
- ಮುಂಬಯಿ–ಪುಣೆ ಪ್ರದೇಶ.
- ಅಹಮದಾಬಾದ್–ವಡೋದರ ಪ್ರದೇಶ.
- ಕೊಯಮತ್ತೂರು–ಬೆಂಗಳೂರು ಪ್ರದೇಶ.
- ದೆಹಲಿ–ಮೀರತ್ ಪ್ರದೇಶ.

23. ಭಾರತದ ಸರಕಾರಿ ವಲಯದ ಪ್ರಮುಖ ಕಬ್ಬಿಣ–ಉಕ್ಕು ಕೈಗಾರಿಕೆಗಳನ್ನು ಪಟ್ಟಿ ಮಾಡಿ.
- ಭಾರತೀಯ ಕಬ್ಬಿಣ ಉಕ್ಕು ಕಂಪನಿ – ಬರ್ನಪುರ.
- ಭಾರತೀಯ ಕಬ್ಬಿಣ ಉಕ್ಕು ಕಂಪನಿ – ಭದ್ರಾವತಿ.
- ಹಿಂದುಸ್ಥಾನ್ ಉಕ್ಕು ಲಿಮಿಟೆಡ್ – ಭಿಲಾಯಿ.
- ಹಿಂದುಸ್ಥಾನ್ ಉಕ್ಕು ಲಿಮಿಟೆಡ್ – ರೂರ್ಕೆಲಾ.
- ಹಿಂದುಸ್ಥಾನ್ ಉಕ್ಕು ಲಿಮಿಟೆಡ್ – ದುರ್ಗಾಪುರ.
- ಟಾಟಾ ಉಕ್ಕು ಸ್ಥಾವರ – ಕಳಿಂಗ ನಗರ.

24. ಅಲ್ಯುಮಿನಿಯಂನ ಪ್ರಾಮುಖ್ಯತೆ ಬರೆಯಿರಿ/ ಅಲ್ಯುಮಿನಿಯಂನ ಉಪಯೋಗಗಳೇನು?
- ವಿಮಾನ, ವಾಹನ, ರೈಲು ತಯಾರಿಕೆ.
- ಬಣ್ಣ ತಯಾರಿಕೆ.
- ಗೃಹಬಳಕೆ ವಸ್ತುಗಳ ತಯಾರಿಕೆ.
- ವಿದ್ಯುತ್ ಕೇಬಲ್ ತಯಾರಿಕೆ.
- ತಾಮ್ರದ ಬದಲೀ ವಸ್ತು.

25. ಭಾರತದಲ್ಲಿ ಹತ್ತಿ ಬಟ್ಟೆ ಕೈಗಾರಿಕೆಗಳ ಹಂಚಿಕೆ ವಿವರಿಸಿ.
- 76 ಕ್ಕೂ ಹೆಚ್ಚು ನಗರಗಳಲ್ಲಿವೆ
- ಹತ್ತಿ ಬೆಳೆಯುವ ರಾಜ್ಯಗಳಲ್ಲಿ ಹೆಚ್ಚು.
- ಮಹಾರಾಷ್ಟ್ರ, ಗುಜರಾತ್ ಪ್ರಮುಖ.
- ಕರ್ನಾಟಕ, ತಮಿಳುನಾಡು, ಮಧ್ಯಪ್ರದೇಶ.
- ಮುಂಬಯಿ ಪ್ರಸಿದ್ಧ

26. ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳ ಮಹತ್ವ/ಪ್ರಾಮುಖ್ಯತೆ ಬರೆಯಿರಿ.
- ತಾಂತ್ರಿಕ ಬೆಳವಣಿಗೆ ತ್ವರಿತ
- ಸಾಮಾಜಿಕ, ಆರ್ಥಿಕ ಬದಲಾವಣೆ.
- ಯುವ ಜನಸಂಖ್ಯೆಗೆ ಉದ್ಯೋಗಗಳು.
- ರಫ್ತು ಹೆಚ್ಚಳ.
- ವಿದೇಶೀ ವಿನಿಮಯ ಹೆಚ್ಚಳ.

### ಹಣ ಮತ್ತು ಸಾಲ

27. ಹಣದ ಕಾರ್ಯಗಳನ್ನು ಬರೆಯಿರಿ.
- ವಿನಿಮಯ ಮಾಧ್ಯಮ.
- ಮೌಲ್ಯ ನಿರ್ಣಯ.
- ವಿಳಂಬಿತ ಸಂಧಾಯ.
- ಖರೀದಿ ಶಕ್ತಿಯ ಸಂಗ್ರಹ.
- ಮೌಲ್ಯ ವರ್ಗಾವಣೆ.

28. ಬ್ಯಾಂಕ್ ಗಳ ಮಹತ್ವ/ಪ್ರಾಮುಖ್ಯತೆ ಬರೆಯಿರಿ.
- ಉಳಿತಾಯಕ್ಕೆ ಪ್ರೋತ್ಸಾಹ.
- ಬಂಡವಾಳ ಸಂಗ್ರಹ.
- ಬಡ್ಡಿ ಕೊಡುತ್ತವೆ.

- ಸಾಲ ನೀಡುತ್ತವೆ.
- ಕೃಷಿ, ಕೈಗಾರಿಕೆ ಅಭಿವೃದ್ಧಿ.
- ATM ಸೇವೆ.

29. ಭಾರತೀಯ ರಿಸರ್ವ್ ಬ್ಯಾಂಕ್ (RBI) ನ ಕಾರ್ಯಗಳನ್ನು ಬರೆಯಿರಿ.
    - ನೋಟು ಚಲಾವಣೆ.
    - ಸರ್ಕಾರದ ಬ್ಯಾಂಕ್.
    - ಬ್ಯಾಂಕ್ ಗಳ ಬ್ಯಾಂಕ್
    - ರಾಷ್ಟ್ರೀಯ ಸಂಧಾಯ.
    - ಸಾಲ ನಿಯಂತ್ರಣ.
    - ವಿದೇಶೀ ವಿನಿಮಯ ಸಂಗ್ರಹ

30. ಭಾರತದ ಹಣ ಪೂರೈಕೆಯ ಪರಿಕಲ್ಪನೆಗಳನ್ನು ಬರೆಯಿರಿ.
    - M1 = ನೋಟು + ಬೇಡಿಕೆ ಠೇವಣಿಗಳು.
    - M2 = M1+ ಅಂಚೆ ಉಳಿತಾಯ ಠೇವಣಿ.
    - M3 = M 1+ ಮುದ್ದತ್ ಠೇವಣಿ.
    - M4 = M3 + ಅಂಚೆ ಒಟ್ಟು ಠೇವಣಿ.

## ಉದ್ಯಮಗಾರಿಕೆ

31. ಉದ್ಯಮಿಯ ಗುಣಲಕ್ಷಣಗಳನ್ನು ಬರೆಯಿರಿ.
    - ಸೃಜನಾತ್ಮಕ.
    - ಕ್ರಿಯಾತ್ಮಕ.
    - ನಾಯಕತ್ವ.
    - ತಂಡ ಕಟ್ಟುವುದು.
    - ನಷ್ಟ ಭರಿಸುವುದು.
    - ಸಮಸ್ಯೆ ಪರಿಹಾರ.

32. ಉದ್ಯಮಿಯ ಕಾರ್ಯಗಳನ್ನು ಬರೆಯಿರಿ.
    - ವ್ಯಾಪಾರ ಆರಂಭ.
    - ನಿರ್ಧಾರಗಳನ್ನು ಕೈಗೊಳ್ಳುತ್ತಾನೆ.
    - ಹೊಸ ವಿಧಾನ ರೂಢಿಗೆ ತರುತ್ತಾನೆ.
    - ಹಣಕಾಸಿನ ಆಯವ್ಯಯ.
    - ಕಷ್ಟ ನಷ್ಟ ಎದುರಿಸುತ್ತಾನೆ.

33. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರ/ ಪ್ರಾಮುಖ್ಯತೆ ವಿವರಿಸಿ.
    - ಬಂಡವಾಳ ಸಂಗ್ರಹ.
    - ಉದ್ಯೋಗಾವಕಾಶಗಳು.
    - GDP ಹೆಚ್ಚಳ.
    - ಮಾರುಕಟ್ಟೆ ಅಭಿವೃದ್ಧಿ.
    - ಕೈಗಾರಿಕಾ ಅಭಿವೃದ್ಧಿ.
    - ರಫ್ತು ಹೆಚ್ಚಳ.

34. ಉದ್ಯಮಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಇರುವ ಅವಕಾಶಗಳು ಯಾವುವು?
    - ಜಾಹಿರಾತು ಸೇವಾ ಸಂಸ್ಥೆ.
    - ಕೈಗಾರಿಕಾ ಸಲಹಾ ಸಂಸ್ಥೆ.
    - ವಸ್ತುಗಳ ಬಾಡಿಗೆ.
    - ಸಂಶೋಧನೆ.
    - ಅಂತರ್ಜಾಲ ಸಂವಹನ.

35. ಉದ್ಯಮಿಗಳಿಗೆ ಹಣಕಾಸಿನ ಸಹಾಯ ಒದಗಿಸುವ ಸಂಸ್ಥೆಗಳನ್ನು ಪಟ್ಟಿ ಮಾಡಿ.
    - ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್.
    - ಕೃಷಿ ಅಭಿವೃದ್ಧಿ ಬ್ಯಾಂಕ್.
    - ಆಮದು ರಫ್ತು ಬ್ಯಾಂಕ್.
    - ಕೈಗಾರಿಕಾ ಹಣಕಾಸು ನಿಗಮ.

36. ಉದ್ಯಮ ಪ್ರವರ್ತಕ ಸಂಸ್ಥೆಗಳನ್ನು ಹೆಸರಿಸಿ.
    - ಜಿಲ್ಲಾ ಕೈಗಾರಿಕಾ ಕೇಂದ್ರಗಳು.
    - ಸಣ್ಣ ಕೈಗಾರಿಕಾ ಅಭಿವೃದ್ಧಿ ಸಂಸ್ಥೆ.
    - ಕೈಗಾರಿಕಾ ಪ್ರದೇಶಗಳು.
    - ತಾಂತ್ರಿಕ ಸಲಹಾ ಸಂಸ್ಥೆಗಳು.

## *4 ಅಂಕದ ಪ್ರಶ್ನೆಗಳು*

## 7. ಸ್ವಾತಂತ್ರ್ಯ ಹೋರಾಟ

1. ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.
    - ಸದಸ್ಯರು: W.C ಬ್ಯಾನರ್ಜಿ, ರಾನಡೆ, ದಾದಾಬಾಯಿ ನವರೋಜಿ, ಸುರೇಂದ್ರನಾಥ ಬ್ಯಾನರ್ಜಿ,G.K ಗೋಖಲೆ.
    - ಉದಾರ ರಾಷ್ಟ್ರವಾದ.
    - ಬ್ರಿಟಿಷ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ.
    - ಮನವಿಗಳ ಮೂಲಕ ಸರ್ಕಾರದ ಮುಂದೆ ಬೇಡಿಕೆ.
    - ದಾದಾಬಾಯಿ ನವರೋಜಿ ಸಂಪತ್ತಿನ ಸೋರುವಿಕೆ ಸಿದ್ದಾಂತ ಮಂಡಿಸಿದರು.

2. ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿ

- ಸದಸ್ಯರು: ಅರಬಿಂದೋ ಘೋಷ, ಬಿಪಿನ್ ಚಂದ್ರಪಾಲ್, ಬಾಲಗಂಗಾಧರ ತಿಲಕ್, ಲಾಲಾ ಲಜಪತ್ ರಾಯ್,
- ಬಂಗಾಳದ ವಿಭಜನೆಯನ್ನು ವಿರೋಧಿಸಿದರು
- ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದರು
- ಸ್ವದೇಶಿ ಆಂದೋಲನಕ್ಕೆ ಕರೆ ನೀಡಿದರು
- ಪತ್ರಿಕೆಗಳಲ್ಲಿ ಕ್ರಾಂತಿಕಾರಕ ಬರವಣಿಗೆಗಳು.

3. ಸ್ವಾತಂತ್ರ್ಯ ಹೋರಾಟದಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ

- ತೀವ್ರವಾದಿಗಳಲ್ಲಿ ಪ್ರಮುಖರಾಗಿದ್ದಾರೆ.
- ಬಂಗಾಳದ ವಿಭಜನೆಯನ್ನು ವಿರೋಧಿಸಿದರು
- ಸ್ವರಾಜ್ಯವು ನನ್ನ ಜನ್ಮಸಿದ್ದ ಹಕ್ಕು ಎಂದು ಘೋಷಣೆ
- ಗಣೇಶೋತ್ಸವ, ಶಿವಾಜಿ ಜಯಂತಿ, ಆಚರಣೆ.
- ಕೇಸರಿ ಮತ್ತು ಮರಾಠ ಪತ್ರಿಕೆ ಪ್ರಾರಂಭಿಸಿದರು
- ಗೀತಾ ರಹಸ್ಯ ಗ್ರಂಥವನ್ನು ರಚಿಸಿದರು

4. ಬಂಗಾಳದ ವಿಭಜನೆ ಮತ್ತು ಅದರ ವಿರುದ್ಧ ನಡೆದ ಹೋರಾಟ ವಿವರಿಸಿ.

- 1905 ರಲ್ಲಿ ಲಾರ್ಡಕರ್ಜನ್ ನಿಂದ ಬಂಗಾಳದ ವಿಭಜನೆ
- ಕಾಂಗ್ರೆಸ್ ಬಂಗಾಳದ ವಿಭಜನೆ ವಿರೋಧಿಸಿತು.
- ಹಿಂದೂ ಮುಸ್ಲಿಂ ಭಾವೈಕ್ಯತೆಗಾಗಿ ರಕ್ಷಾಬಂಧನ ಕಾರ್ಯಕ್ರಮ.
- ಸ್ವದೇಶಿ ಆಂದೊಲನಕ್ಕೆ ಕರೆ.
- 1911 ರಲ್ಲಿ ಬಂಗಾಳದ ವಿಭಜನೆಯನ್ನು ರದ್ದು.

5. ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರ ವಿವರಿಸಿರಿ

- ಸದಸ್ಯರು: ಭಗತ್ ಸಿಂಗ್, ಚಂದ್ರಶೇಖರ ಆಜಾದ್, ಸಾರ್ವರಕರ್, ರಾಸ್ ಬಿಹಾರಿ ಬೋಸ್, ಸುಖದೇವ್,
- ಪೂರ್ಣ ಸ್ವಾತಂತ್ರ್ಯದ ಕನಸು ಕಂಡಿದ್ದರು.
- ಇಂಗ್ಲೇಂಡಿನಲ್ಲಿ ಲೋಟಸ್, ಮತ್ತು ಡಾಗರ್ ಗುಪ್ತ ಸಂಘಟನೆಗಳ ಸ್ಥಾಪನೆ.
- ಭಾರತದಲ್ಲಿ ಅನುಶೀಲನ ಸಮಿತಿ, ಮತ್ತು ಅಭಿನವ ಭಾರತ ರಹಸ್ಯ ಸಂಘಟನೆ ಸ್ಥಾಪಿಸಿದರು.
- ತಮ್ಮ ಗುರಿ ಸಾಧನೆಗೆ ಬಂದೂಕು ಮತ್ತು ಬಾಂಬುಗಳ ಪ್ರಯೋಗ ಮಾಡಿದರು.

## ಗಾಂಧಿ ಯುಗ ಮತ್ತು ರಾಷ್ಟ್ರೀಯ ಹೋರಾಟ

6. ಗಾಂಧೀಜಿಯವರ ಆರಂಭದ ಹೋರಾಟಗಳನ್ನು ವಿವರಿಸಿ.

- ವಾಸ್ತವ ತಿಳಿಯಲು ಭಾರತ ದರ್ಶನ
- ರೈತರು, ದಲಿತರು, ಕಾರ್ಮಿಕರ ಸಮಸ್ಯೆ ಆಲಿಸಿದರು.
- ಚಂಪಾರಣ್ಯ ಚಳುವಳಿ.
- ಹತ್ತಿ ಗಿರಣಿ ಕಾರ್ಮಿಕರ ಪರ ಹೋರಾಟ.
- ಖೇಡಾ ರೈತರ ಪರ ಹೋರಾಟ.

7. ಅಸಹಕಾರ ಚಳುವಳಿಯನ್ನು ವಿವರಿಸಿ.

- 1920 ಸಪ್ಟೆಂಬರ 4 ರಂದು ಆರಂಭ.
- ನಾಯಕರು ವಕೀಲ ವೃತ್ತಿ ತ್ಯಜಿಸಿದರು
- ವಿದ್ಯಾರ್ಥಿಗಳು ಶಾಲಾ – ಕಾಲೇಜು ತೊರೆದರು
- 1919ರ ಶಾಸನಸಭೆ ಚುಣಾವಣೆಗಳನ್ನು ಬಹಿಷ್ಕರಿಸಿದರು
- ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಿದರು
- ವಿದೇಶಿ ಬಟ್ಟೆಗಳನ್ನು ಸುಡಲಾಯಿತು

8. ಕಾನೂನು ಭಂಗ ಚಳುವಳಿ/ದಂಡಿ ಸತ್ಯಾಗ್ರಹ ಕುರಿತು ವಿವರಿಸಿ

- ವೈಸರಾಯ್ ನಿಂದ ಗಾಂಧಿಜಿಯ 11ಬೇಡಿಕೆಗಳ ತಿರಸ್ಕಾರ
- 1930 ಸಾಬರಮತಿಯಿಂದ ದಂಡಿಗೆ ಕಾಲ್ನಡಿಗೆ
- ದಂಡಿಯಲ್ಲಿ ಗಾಂಧೀಜಿ ಉಪ್ಪನ್ನು ತಯಾರಿಸಿದರು.
- ದೇಶಾದ್ಯಂತ ಉಪ್ಪಿನ ಸತ್ಯಾಗ್ರಹ
- ಚರಕ ಈ ಚಳುವಳಿಯಲ್ಲಿ ಪ್ರಸಿದ್ದವಾಯಿತು
- ಗಾಂಧೀ, ನೆಹರು, ಪಟೇಲ್, ಮೊದಲಾದವರ ಬಂಧನ

9. ಕ್ವಿಟ್ ಇಂಡಿಯಾ ಚಳುವಳಿ ಕುರಿತು ಬರೆಯಿರಿ

- 1942 ರ ಕ್ರಿಪ್ಸ ಆಯೋಗದ ಸಲಹೆ ವಿರೋಧಿಸಿ ಕಾಂಗ್ರೆಸ್ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡಿತು.
- 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎನ್ನುವದು ಇದರ ಆಶಯವಾಗಿತ್ತು.
- ಗಾಂಧೀಜಿಯವರು 'ಮಾಡು ಇಲ್ಲವೆ ಮಡಿ' ಎಂದು ಕರೆ ನೀಡಿದರು
- ಎಲ್ಲ ಹೋರಾಟಗಾರರನ್ನು ಬ್ರಿಟಿಷ್ ಸರ್ಕಾರ ಬಂಧಿಸಿತು
- ಜಯಪ್ರಕಾಶ ನಾರಾಯಣರು ಚಳುವಳಿಯನ್ನು ಮುಂದುವರೆಸಿದರು
- ಮುಸ್ಲಿಂ ಲೀಗ್ ಈ ಚಳುವಳಿಯಿಂದ ದೂರ ಸರಿಯಿತು

10. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ಪಾತ್ರ

- 1920 ರಿಂದ 1947 ರ ಕಾಲ ಗಾಂಧಿಯುಗ.
- ಅಹಿಂಸೆ ಮತ್ತು ಸತ್ಯಾಗ್ರಹ ಹೋರಾಟದ ಅಸ್ತ್ರಗಳು.
- 1920ರಲ್ಲಿ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದರು
- ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಹಿಂದಿರುಗಿಸಿದರು
- 1930ರಲ್ಲಿ ಕಾನೂನು ಭಂಗ ಚಳುವಳಿ ಆರಂಭಿಸಿದರು
- ದಂಡಿ ಸತ್ಯಾಗ್ರಹ ಕೈಗೊಂಡರು
- 1942 ರಲ್ಲಿ ಮಾಡು ಇಲ್ಲವೆ ಮಡಿ ಎಂದು ಕರೆಕೊಟ್ಟರು
- 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಶ್ರಮಿಸಿದರು.

11. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ ಚಂದ್ರ ಬೋಸರ ಪಾತ್ರ ಕುರಿತು ವಿವರಿಸಿ

- ಪ್ರತಿಷ್ಠಿತ ಹುದ್ದೆ ತ್ಯಜಿಸಿ ಚಳುವಳಿಗೆ ಧುಮಿಕಿದರು.
- ಫಾರ್ವರ್ಡ್ ಬ್ಲಾಕ್ ಪಕ್ಷ ಕಟ್ಟಿದರು
- ವಿದೇಶದಲ್ಲಿದ್ದ ಭಾರತಿಯರನ್ನು ಸಂಘಟಿಸಿ INA ಸೈನ್ಯ ಕಟ್ಟಿದರು.
- 'ನನಗೆ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ' ಎಂದು ಕರೆ ನೀಡಿದರು.
- ದೆಹಲಿ ಚಲೋ ಕರೆ ನೀಡಿದರು.
- ಬ್ರಿಟಷರಿಂದ ಈಶಾನ್ಯದ ಅನೇಕ ಪ್ರದೇಶ ವಶ

12. ಪ್ರಧಾನಿಯಾಗಿ ಜವಹರ್ ಲಾಲ್ ನೆಹರೂ ರವರ ಸಾಧನೆಗಳೇನು?

- ಕೈಗಾರೀಕರಣ ಮತ್ತು ನವಭಾರತದ ಶಿಲ್ಪಿ.
- ಸಂಸ್ಥಾನಗಳ ವಿಲೀನದಲ್ಲಿ ಪ್ರಮುಖ ಪಾತ್ರ.
- ಪಂಚ ವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು
- ಭಾಷಾವಾರು ಪ್ರಾಂತಗಳ ರಚನೆಗೆ ಕಾರಣರಾದರು
- ಮಿಶ್ರ ಆರ್ಥಿಕ ವ್ಯವಸ್ಥೆ ಪರಿಚಯಿಸಿದರು.
- ಪಂಚಶೀಲ ತತ್ವಗಳನ್ನು ರೂಪಿಸಿದರು.

13. ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಮತ್ತು ಕಾರ್ಮಿಕರ ಪಾತ್ರ ವಿವರಿಸಿ.

- ಚಂಪಾರಣ್ಯದಲ್ಲಿ ನೀಲಿ ಬೆಳೆ ವಿರುದ್ಧ ಪ್ರತಿಭಟನೆ.
- ಭೂಕಂದಾಯದ ವಿರುದ್ಧ ಹರತಾಳ.
- ಮಲಬಾರ್ ಪ್ರದೇಶದಲ್ಲಿ ರೈತರ ಹರತಾಳ.
- ತೆಲಂಗಾಣದಲ್ಲಿ ಜಮೀನ್ದಾರರ ವಿರುದ್ಧ ರೈತರ ಪ್ರತಿಭಟನೆ.
- ಮಹಾರಾಷ್ಟ್ರದಲ್ಲಿ ಕಡಿಮೆ ಕೂಲಿ ವಿರುದ್ದ ಚಳುವಳಿ.
- ರೈಲ್ವೆ ಕೂಲಿಗಳಿಂದ ನಿಲ್ದಾಣಗಳಲ್ಲಿ ಮುಷ್ಕರ.

14. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳ ಬಂಡಾಯವನ್ನು ವಿವರಿಸಿ

- ಬ್ರಿಟಿಷರ ಕಂದಾಯ, ಅರಣ್ಯ ನೀತಿಗಳ ವಿರುದ್ದ ದಂಗೆ
- ಸಂತಾಲರ ದಂಗೆ, ಕೋಲರ ದಂಗೆ, ಮುಂಡ ಚಳುವಳಿ ಪ್ರಮುಖವಾಗಿವೆ
- ಕರ್ನಾಟಕದಲ್ಲಿ ಹಲಗಲಿಯ ಬೇಡರ ದಂಗೆ ಪ್ರಮುಖ.
- ಬ್ರಿಟಿಷರು. ಜಮಿನ್ದಾರರ ವಿರುದ್ದ ರಸ್ಯ ಸಭೆ.
- ಜಮೀನ್ದಾರರ ಲೂಟಿ.
- ಭಾರತದ ಆದ್ಯ ಹೋರಾಟ.

15. ಅಂಬೇಡ್ಕರವರ ಹೋರಾಟ/ಸಾಧನೆಗಳನ್ನು ವಿವರಿಸಿ.

- ಸಾಮಾಜಿಕ ಸ್ವಾತಂತ್ರ್ಯ ಪ್ರತಿಪಾದನೆ.
- ಮಹರ್ ಮತ್ತು ಕಾಲಾರಾಂ ಚಳುವಳಿ ರೂಪಿಸಿದರು.
- ಸ್ವತಂತ್ರ ಕಾರ್ಮಿಕ ಪಕ್ಷ ಸ್ಥಾಪನೆ.
- ಪ್ರಬುದ್ಧ ಭಾರತ ಮತ್ತು ಮೂಕನಾಯಕ ಪತ್ರಿಕೆ ಆರಂಭ.
- ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದರು.
- ದೇಶದ ಮೊದಲ ಕಾನೂನು ಮಂತ್ರಿಯಾಗಿ ಸೇವೆ.

## ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

16. ಸ್ವಾತಂತ್ರ್ಯಾನಂತರ ಭಾರತ ಎದುರಿಸುತ್ತಿರುವ ಸಮಸ್ಯೆಗಳಾವವು

- ನಿರುದ್ಯೋಗ.
- ಭ್ರಷ್ಟಾಚಾರ.
- ಕೋಮುವಾದ
- ತಾರತಮ್ಯ.
- ಭಯೋತ್ಪಾದಕತೆ.
- ಸ್ತ್ರೀಯರ ಸ್ಥಾನಮಾನ ಸಮಸ್ಯೆಗಳು
- ಕಾರ್ಪೋರೇಟ್ ತಂತ್ರಗಾರಿಕೆ.

17. ನಿರುದ್ಯೋಗಕ್ಕೆ ಕಾರಣ ಮತ್ತು ಪರಿಹಾರ ಕ್ರಮಗಳನ್ನು ತಿಳಿಸಿ.

- ಕಾರಣ : ಮಿತಿಮೀರಿದ ಜನ ಸಂಖ್ಯೆ.
- ಹೆಚ್ಚಾದ ತಂತ್ರಜ್ಞಾನ ಬಳಕೆ.
- ಪರಿಹಾರ ಕ್ರಮಗಳು : ಸ್ವಯಂ ಉದ್ಯೋಗಕ್ಕೆ ಸಹಾಯಧನ.
- ಉದ್ಯೋಗ ಸೃಷ್ಟಿ ಕ್ರಮಗಳು.
- ಕೌಶಲ್ಯಾಧಾರಿತ ಗುಣಮಟ್ಟದ ಶಿಕ್ಷಣ.

18. ಭ್ರಷ್ಟಾಚಾರಕ್ಕೆ ಕಾರಣ ಮತ್ತು ಪರಿಣಾಮಗಳನ್ನು ಕುರಿತು ಚರ್ಚಿಸಿರಿ

ಕಾರಣಗಳು:

- ವೈಯಕ್ತಿಕ ಲಾಭ
- ಸ್ವಾರ್ಥ
- ದುರ್ಬಲ ಕಾನೂನು ವ್ಯವಸ್ಥೆ

ಪರಿಣಾಮಗಳು:

- ಅನೈತಿಕ ಚಟುವಟಿಕೆಗಳಿಗೆ ಅವಕಾಶ
- ವ್ಯವಸ್ಥಿತ ಅಪರಾಧಗಳಿಗೆ ಅವಕಾಶ
- ಆರ್ಥಿಕ ಅಪರಾಧಗಳು

19. ಭ್ರಷ್ಟಾಚಾರದ ಜಾಲದೊಳಗೆ ಸೇರಿಕೊಂಡಿರುವ ಅಂಶಗಳಾವುವು?

- ತೆರಿಗೆ ಕಳ್ಳತನ.
- ಅಕ್ರಮ ದಾಸ್ತಾನು.
- ಕಳ್ಳ ಸಾಗಾಣಿಕೆ.
- ಆರ್ಥಿಕ ವಂಚನೆ.
- ಮೋಸಗಾರಿಕೆ.
- ಕಾನೂನು ಉಲ್ಲಂಘನೆ.
- ಔದ್ಯೋಗಿಕ ವಂಚನೆ.

20. ಭ್ರಷ್ಟಾಚಾರ ನಿಯಂತ್ರಣಕ್ಕೆ ಕೈಗೊಳ್ಳಬಹುದಾದ ಕ್ರಮಗಳೇನು?

- ಸಾರ್ವಜನಿಕರ ಸಹಕಾರ
- ಪ್ರಬಲ ರಾಜಕೀಯ ಇಚ್ಛಾಶಕ್ತಿ
- ಜನ ಜಾಗೃತಿ
- ಕಠಿಣ ಶಿಕ್ಷೆ ವಿಧಿಸುವುದು
- ಲೋಕಪಾಲ್ ಮತ್ತು ಲೋಕಾಯುಕ್ತ ಸಂಸ್ಥೆಗಳ ಸ್ಥಾಪನೆ
- ಸರಕಾರಿ ಕಛೇರಿಗಳಲ್ಲಿ CCTV ಅಳವಡಿಸುವುದು

21. ಕೋಮುವಾದವು ದೇಶದ ಐಕ್ಯತೆಗೆ ಮಾರಕವಾಗಿದೆ ಹೇಗೆ? ವಿವರಿಸಿ

- ಅಪನಂಬಿಕೆ ಮತ್ತು ಭಯದ ವಾತಾವರಣ
- ಗುಂಪುಗಾರಿಕೆ ಮತ್ತು ರಾಜಕೀಯ ಪೈಪೋಟಿ
- ಸಾಮಾಜಿಕ ನೆಮ್ಮದಿಯ ನಾಶ
- ದೇಶದ ಐಕ್ಯತೆ & ಸಮಗ್ರತೆಗೆ ಧಕ್ಕೆ
- ಪ್ರಾಣಹಾನಿ

22. ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು/ಲಿಂಗ ಅಸಮಾನತೆ ನಿವಾರಣೆಗೆ ಸರಕಾರ ಕೈಗೊಂಡ ಕ್ರಮಗಳಾವವು?

- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
- ಬಾಲ್ಯ ವಿವಾಹ ನಿಷೇದ ಕಾಯ್ದೆ
- ವರದಕ್ಷಿಣೆ ನಿಷೇದ ಕಾಯ್ದೆ
- ಸ್ಥಳೀಯ ಸಂಸ್ಥೆಗಳಲ್ಲಿ 33% ಮಿಸಲಾತಿ
- ಮಹಿಳಾ ಆಯೋಗ ರಚನೆ
- ಸ್ತ್ರೀ ಶಕ್ತಿ ಸಂಘಗಳ ಸ್ಥಾಪನೆ

23. ಉಗ್ರಗಾಮಿತ್ವ / ಭಯೋತ್ಪಾದಕತೆಗೆ ಕಾರಣಗಳೇನು?

- ಧಾರ್ಮಿಕ ಮೂಲಭೂತ ಚಿಂತನೆಗಳು
- ಪ್ರತ್ಯೇಕತಾವಾದ
- ತೀವ್ರ ಎಡಪಂಥಿಯ ವಿಚಾರಗಳು
- ನಾಡ ಬಿಡುಗಡೆಯ ಛಲ
- ವರ್ಣ ದ್ವೇಷ ನೀತಿ
- ಉಗ್ರವಾದಿ ಸಂಘಟನೆಗಳು.


24. ಪ್ರಮುಖ ಭಯೋತ್ಪಾದಕ ದಾಳಿಗಳನ್ನು ಬರೆಯಿರಿ.

- 2001 ರಲ್ಲಿ ಅಮೆರಿಕಾದ ವ್ಯಾಪಾರ ಕೇಂದ್ರ ಧ್ವಂಸ.
- ಬ್ರಿಟನ್, ಇರಾನ್, ಭಾರತ, ಪಾಕಿಸ್ಥಾನ ಮುಂತಾದ ಕಡೆ ಸರಣಿ ಬಾಂಬ್ ಸ್ಫೋಟ.
- 2007 ರ ಮುಂಬೈ ದಾಳಿ.
- ನವದೆಹಲಿಯ ಸಂಸತ್ ಮೇಲಿ ದಾಳಿ.
- ಹೈದರಾಬಾದ್, ಚೆನ್ನೈ, ಬೆಂಗಳೂರು ಮುಂತಾದ ಕಡೆ ದಾಳಿ.

1. ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿ

A) $82_{1/2}$ ಪೂರ್ವ ರೇಖಾಂಶ C) ನರ್ಮದಾ ನದಿ


B) ಕೆ 2 ಶಿಖರ D) ಮುಂಬಯಿ




2. ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.

A) ಕರ್ಕಾಟಕ ಸಂಕ್ರಾತಿ ವೃತ್ತ C) ದಾಮೋದರ ನದಿ

B) ಪಶ್ಚಿಮ ಘಟ್ಟಗಳು D) ಸಿಂಗಭೂಮ್




3. ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.

A) ಇಂದಿರಾ ಕೋಲ್ C) ಗಂಗಾ ನದಿ


B) ಅಣೈಮುಡಿ ಶೀಖರ D) ಮಂಗಳೂರು ಬಂದರು




4. ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.

A) ಇಂದಿರಾ ಪಾಯಿಂಟ್ C) ಗೋದಾವರಿ ನದಿ

B) ಗುರು ಶಿಖರ D) ಕೊಚ್ಚಿ ಬಂದರು




| | |
|---|---|
| **5.** ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.<br>**A)** ಪಾಕ್ ಜಲಸಂಧಿ **C)** ಕಿಯೋಂಜಾರ್<br>**B)** ತುಂಗಭದ್ರಾ ನದಿ **D)** ಕೊಲ್ಕತ್ತಾ<br><br> | **6.** ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.<br>**A)** ಮನ್ನಾರ್ ಖಾರಿ **C)** ಸುಂದರ್ ಘಡ್<br>**B)** ಕಾವೇರಿ ನದಿ **D)** ಹಾಲ್ದಿಯಾ ಬಂದರು.<br><br> |
| **7.** ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.<br>**A)** ವಿಂಧ್ಯಾ ಪರ್ವತಗಳು **C)** ಸೇಲಂ<br>**B)** ತಾಪಿ ನದಿ **D)** ಪಾರಾದೀಪ್ ಬಂದರು<br><br> | **8.** ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.<br>**A)** ಮಲಬಾರ್ ತೀರ **C)** ಭಾಕ್ರಾ ನಂಗಲ್ ಆಣೆಕಟ್ಟು<br>**B)** ಬ್ರಹ್ಮಪುತ್ರ ನದಿ **D)** ವಿಶಾಖ ಪಟ್ಟಣ<br><br> |

9. ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.

A) ಕೋರಮಂಡಲ ತೀರ C) ಬಾಂಬೆ ಹೈ

B) ರಿಹಾಂಡ್ ಯೋಜನೆ D) ಚೆನ್ನೈ




10. ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.

A) ಹಿರಾಕುಡ್ ಆಣೆಕಟ್ಟು C) ಬೆಂಗಳೂರು

B) ತುತಕುಡಿ ಬಂದರು D) ದಿಗ್ಬಾಯಿ




11. ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.

A) ಕೃಷ್ಣಾ ಮೇಲ್ದಂಡೆ ಯೋಜನೆ C) ದೆಹಲಿ

B) ಹೈದರಾಬಾದ್ D) ಬೊಕಾರೋ




12. ಭಾರತದ ನಕಾಶೆ ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ.

A) ನಾಗಾರ್ಜುನ ಸಾಗರ ಯೋಜನೆ C) ಗುವಾಹಾಟಿ

B) ಕೋಸಿ ಯೋಜನೆ D) ಕೋರಾಪಾಟ್



ಈ ಮೇಲಿನ ಪಾಸಿಂಗ್ ಪ್ಯಾಕೇಜ್ ವೇಳಾಪಟ್ಟಿ ಪ್ರಕಾರ ನಿಯಮಿತವಾಗಿ ವಿದ್ಯಾರ್ಥಿಗಳು ಅಭ್ಯಾಸ ಮಾಡಲು ರಚಿಸಲಾಗಿರುವುದು

# ಪಾಸಿಂಗ್ ಟಾಸ್ಕ್

ಇದನ್ನು ಮತ್ತೊಂದು ಡಾಕ್ಯುಮೆಂಟ್ ನಲ್ಲಿ ರಚಿಸಲಾಗಿದೆ ದಯವಿಟ್ಟು ವೀಕ್ಷಿಸಿ